xv) ನಾವು ನಡೆಸಿದಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳು ಹಾಗೂ ವ್ಯವಸ್ಥಾಪನೆಯು ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಹಾಗೂ ವ್ಯವಸ್ಥಾಪನೆಯು ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ನಿರ್ದೇಶಕರುಗಳೊಂದಿಗೆ ಅಥವಾ ಅವರಿಗೆ ಸಂಬಂಧಿಸಿರುವ ವ್ಯಕ್ತಿಗಳೊಂದಿಗೆ ಯಾವುದೇ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ.

xvi) ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45 1ಎ ಅಡಿಯಲ್ಲಿ ನೋಂದಣಿ ಮಾಡಿಸುವ ಅಗತ್ಯತೆಯಿರುವುದಿಲ್ಲ.

2. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (3)ರ ಅಗತ್ಯತೆಯಂತೆ, ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು :

ಎ) ನಮ್ಮ ಅತ್ಯುತ್ತಮ ಅರಿವಿನ ಅನುಸಾರ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ ಅಗತ್ಯತೆ ಎಂಬುದಾಗಿ ಕಂಡುಬಂದಹ ಎಲ್ಲಾ ಮಾಹಿತಿಗಳನ್ನು ಹಾಗೂ ವಿವರಗಳನ್ನು ನಾವು ಕೋರಿದೆವು ಹಾಗೂ ಪಡೆದುಕೊಂಡೆವು.

ಬಿ) ನಮ್ಮ ಅಭಿಪ್ರಾಯದಲ್ಲಿ, ಅಧಿನಿಯಮ/ನಿಯಮ/ನಿಬಂಧನೆಗಳ ಅನುಸಾರ ಅಗತ್ಯತೆಯಿರುವಂತೆ ಕಂಪನಿಯು ನಾವು ನಡೆಸಿದ ಲೆಕ್ಕಪತ್ರ ಪುಸ್ತಕಗಳ ಪರಿಶೀಲನೆಯಿಂದ ಕಂಡುಬಂದಷ್ಟರ ಮಟ್ಟಿಗೆ ಸಮರ್ಪಕ ಲೆಕ್ಕಪತ್ರಗಳ ಪುಸ್ತಕಗಳನ್ನು ನಿರ್ವಹಿಸಿರುವುದು.

ಸಿ) ಈ ವರದಿಯು ವ್ಯವಹರಿಸಿರುವ ಆಸ್ತಿ-ಜವಾಬ್ದಾರಿ ತ:ಖ್ತೆ, ಲಾಭ ಮತ್ತು ನಷ್ಟಗಳ ತ:ಖ್ತೆ ಹಾಗೂ ಹಣಕಾಸು/ನಗದು ಹರಿವಿನ ತ:ಖ್ತೆಗಳು ಲೆಕ್ಕಪತ್ರಗಳ ಪುಸ್ತಕಗಳ ಜೊತೆಯಲ್ಲಿ ತಾಳೆ ಹೊಂದುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ, ಆಸ್ತಿ-ಜವಾಬ್ದಾರಿ ತ:ಖ್ತೆ, ಲಾಭ ಮತ್ತು ನಷ್ಟಗಳ ತ:ಖ್ತೆ ಹಾಗೂ ಹಣಕಾಸು/ನಗದು ಹರಿವಿನ ತ:ಖ್ತೆಗಳು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲ್ಪಟ್ಟಿರುತ್ತವೆ.

ಇ) ನಿರ್ದೇಶಕರುಗಳಿಂದ ಪಡೆದುಕೊಳ್ಳಲಾಗಿರುವ ಹಾಗೂ 31 ಮಾರ್ಚ್ 2018ರಲ್ಲಿದ್ದಂತೆ ನಿರ್ದೇಶಕರುಗಳ ಮಂಡಳಿಯಿಂದ ದಾಖಲೆಗಳಿಗೆ ತೆಗೆದುಕೊಳ್ಳಲಾಗಿರುವ ಲಿಖಿತ ಪತ್ರಗಳ ಆಧಾರದ ಮೇರೆಗೆ, ಅಧಿನಿಯಮದ ಪರಿಚ್ಛೇದ 164 (2)ರಲ್ಲಿನ ಷರತ್ತುಗಳ ಅನುಸಾರ ಯಾವುದೇ ಓರ್ವ ನಿರ್ದೇಕರು ಅನರ್ಹಗೊಂಡಿರುವುದಿಲ್ಲ.

ಎಫ್) ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ "ಅನುಬಂಧ-ಎ" ಮೂಲಕ ನಾವು ನೀಡಿರುವ ಪ್ರತ್ಯೇಕ ವರದಿಯನ್ನು ಉಲ್ಲೇಖಿಸುವುದು.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳಂತೆ:

i. ಕಂಪನಿಯು ಹಣಕಾಸಿನ ಸ್ಥಿತಿಗತಿಗಳ ಮೇಲೆ ಪರಿಣಾಮ ಭೀರಬಹುದಾದಂತಹ ಯಾವುದೇ ಬಾಕಿ ವಿವಾದಗಳನ್ನು ಹೊಂದಿರುವುದಿಲ್ಲ.

ii. ಕಂಪನಿಯು, ನಿರೀಕ್ಷಿಸಬಹುದಾದ ನಷ್ಟಗಳನ್ನು ಒಳಗೊಂಡಿರುವಂತಹ ವಿಷಯಿಕಗಳು ಇರಬಹುದಾದ ಜನ್ಯ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ.

iii. ಪ್ರಸಕ್ತ ಸಾಲಿನಲ್ಲಿ, ಹೂಡಿಕೆದಾರರುಗಳ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸುವ ಅಗತ್ಯತೆಯಿದ್ದಂತಹ ಯಾವುದೇ ಮೊತ್ತವೂ ಇರಲಿಲ್ಲ.

ಕಾಮತ್ ಅಂಡ್ ರಾವ್
ಚಾರ್ಟರ್ಡ್ ಅಕೌಂಟೆಂಟ್‌ಗಳು
ಐಸಿಎಐ ಸಂಸ್ಥೆಯ ನೋಂದಣಿ ಸಂಖ್ಯೆ 001689ಎಸ್

(ಶ್ರೀನಿವಾಸ್ ಎ. ಕಾಮತ್, ಪಾಲುದಾರರು)
ಸದಸ್ಯತ್ವ ಸಂಖ್ಯೆ 201716

ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತದ ಅದೇ ದಿನಾಂಕದ ಹಣಕಾಸು ತ:ಖ್ತೆಗಳ ಮೇಲೆ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ – ಎ

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (i)ರ ಅಡಿಯಲ್ಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ

"ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತದ" 31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು, ಅದೇ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ಕಂಪನಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧನೆ ಮಾಡಿರುವೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗಾಗಿ ಅಡಳಿತ ಮಂಡಳಿಯ ಜವಾಬ್ದಾರಿ:

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ನಿಗಮದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ನಿಗಮದ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹಾಗೂ ಮಾರ್ಗಸೂಚಿ ಹೊಂದಿರುತ್ತವೆ

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆ ಹಾಗೂ ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯಾಚರಣೆಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ

ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ವಂಚಿಸುವ ಉದ್ದೇಶದಿಂದಲೇ ಆಗಲಿ ಅಥವಾ ತಪ್ಪುಗಳಿಂದಲೇ ಆಗಲಿ, ಇರಬಹುದಾದ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿದೆ.

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿವೆ ಹಾಗೂ ಸೂಕ್ತವಾಗಿವೆ ಎಂಬ ವಿಶ್ವಾಸವು ನಮಗಿದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ:

ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಒಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ.

1. ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ವ್ಯವಸ್ಥೆಯನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ತೋರಿಸುವುದು.
2. ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು.
3. ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಹೊಂದಿರುವಂತಹ ನಿಗಮದ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೆವಾರಿಯನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದನ್ನು ಒಳಗೊಂಡಿರುತ್ತದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು:

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತವು ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರ ಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ನಮ್ಮ ಅಭಿಪ್ರಾಯ:

ನಮ್ಮ ಅಭಿಪ್ರಾಯದಂತೆ, ಕಂಪನಿಯು ಎಲ್ಲಾ ವಿಷಯಕ ಅಂಶಗಳಲ್ಲಿ, ಹಣಕಾಸು ವರದಿಯ ಮೇಲೆ ಒಂದು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವುದು ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯು ಸ್ಥಾಪಿಸಿದ್ದಂತಹ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮಾನದಂಡದ ಆಧಾರದ ಮೇರೆಗೆ, 31 ಮಾರ್ಚ್ 2018ರಲ್ಲಿದ್ದಂತೆ ಅಂತಹ ಹಣಕಾಸು ವರದಿಯ ಮೇಲಿನ ಒಂದು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಗೊಂಡಿತ್ತು.

ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಾವು ಕೈಗೊಂಡ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಅನುಸಾರ, 31 ಮಾರ್ಚ್ 2018ರಲ್ಲಿದ್ದಂತೆ ಈ ಕೆಳಗಿನ ವಿಷಯಕ ದುರ್ಬಲತೆಗಳನ್ನು ಗುರುತಿಸಲಾಯಿತು:

ಕಾಮತ್ ಅಂಡ್ ರಾವ್
ಚಾರ್ಟರ್ಡ್ ಅಕೌಂಟೆಂಟ್‌ಗಳು
ಐಸಿಎಐ ಸಂಸ್ಥೆಯ ನೋಂದಣಿ ಸಂಖ್ಯೆ 001689ಎಸ್

(ಶ್ರೀನಿವಾಸ್ ಎ. ಕಾಮತ್, ಪಾಲುದಾರರು)
ಸದಸ್ಯತ್ವ ಸಂಖ್ಯೆ 201716

ಸ್ಥಳ: ಮಂಗಳೂರು,
ದಿನಾಂಕ: 12.12.2018

ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತ, ಮಂಗಳೂರು ಇದರ 6 ಏಪ್ರಿಲ್ 2017ರಿಂದ 31 ಮಾರ್ಚ್ 2018ರ ಅವಧಿಯ ಲೆಕ್ಕಪತ್ರಗಳ ಮೇಲೆ ಪರಿಚ್ಛೇದ 143 (6) ಬಿ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳು.

ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಹಣಕಾಸಿನ ವರದಿಯ ಚೌಕಟ್ಟಿನ ಪ್ರಕಾರ 06 ಏಪ್ರಿಲ್ 2017ರಿಂದ 31 ಮಾರ್ಚ್ 2018ರ ಅವಧಿಗೆ, ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತ, ಮಂಗಳೂರು ಇದರ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವುದು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಅಧಿನಿಯಮದ ಪರಿಚ್ಛೇದ 139 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು, ಅಧಿನಿಯಮದ ಪರಿಚ್ಛೇದ 143ರ ಅಡಿಯಲ್ಲಿ ಲೆಕ್ಕಪರಿಶೋಧನೆಗಾಗಿ ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಮಾನದಂಡಗಳ ಅನುಸಾರ ನಡೆಸಲಾದಂತಹ ಸ್ವತಂತ್ರ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಹಣಕಾಸು ತ:ಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಜವಾಬ್ದಾರರಾಗಿರುತ್ತಾರೆ. ಇದನ್ನು ಮಾಡಲಾಗಿದೆ ಎಂಬುದಾಗಿ ಅವರು ತಮ್ಮ 05.09.2018ರ ವರದಿಯನ್ನು ರದ್ದುಪಡಿಸಿದಂತಹ 12.12.2018 ದಿನಾಂಕದ ಲೆಕ್ಕಪರಿಶೋಧನಾ ವರದಿಯ ಮೂಲಕ ತಿಳಿಸಿರುತ್ತಾರೆ.

ನಾವು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ, ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತ, ಮಂಗಳೂರು ಇದರ 6 ಏಪ್ರಿಲ್ 2017ರಿಂದ 31 ಮಾರ್ಚ್ 2018ರ ಅವಧಿಗೆ ಅಧಿನಿಯಮದ ಪರಿಚ್ಛೇದ 143 (6) (ಎ) ಅಡಿಯಲ್ಲಿ ಹಣಕಾಸು ತ:ಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರುಗಳ ಕಾರ್ಯಗಳಿಗೆ ಸಂಬಂಧಿತ ಕಾಗದಪತ್ರಗಳನ್ನು ಗಮನಿಸದೆಯೇ ಸ್ವತಂತ್ರವಾಗಿ ನಡೆಸಲಾಯಿತು ಹಾಗೂ ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕಪರಿಶೋಧಕರುಗಳು ಮತ್ತು ಕಂಪನಿಯ ಸಿಬ್ಬಂದಿಯೊಂದಿಗೆ ಪ್ರಶ್ನಾವಳಿಗಳು ಹಾಗೂ ಲೆಕ್ಕಪತ್ರಗಳ ಕೆಲವು ದಾಖಲೆಗಳ ಆಯ್ದ ಪರಿಶೀಲನೆಗೆ ಸೀಮಿತಗೊಳಿಸಲಾಯಿತು.

ಪೂರಕ ಲೆಕ್ಕಪರಿಶೋಧನೆಯ ಸಮಯದಲ್ಲಿ ನಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಾಸನಬದ್ಧ ಲೆಕ್ಕಪರಿಶೋಧಕರುಗಳು ಸ್ವತಂತ್ರ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಮಾಡಿದ ಪರಿಷ್ಕರಣೆಗಳ ಕಾರಣದಿಂದ, ಅಧಿನಿಯಮದ ಪರಿಚ್ಛೇದ 143 (6) (ಬಿ) ಅಡಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿಗೆ ಪೂರಕವಾಗಿ ನಮ್ಮ ಕಡೆಯಿಂದ ಇನ್ನೂ ಹೆಚ್ಚಿನ ಟೀಕೆಟಿಪ್ಪಣಿಗಳು ಯಾವುದೂ ಇರುವುದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗಾಗಿ ಮತ್ತು ಅವರ ಪರವಾಗಿ

–ಸಹಿ ಮಾಡಲಾಗಿದೆ–
(ಇ.ಪಿ. ನಿವೇದಿತಾ)
ಮಹಾಲೇಖಾಪಾಲರು
(ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿನಾಂಕ: 19 ಡಿಸೆಂಬರ್ 2018

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು7499ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ರಲ್ಲಿದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

(ರೂಪಾಯಿಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2018 ರಲ್ಲಿದ್ದಂತೆ
ಈಕ್ವಿಟಿ ಮತ್ತು ಜವಾಬ್ದಾರಿಗಳು:		
1) ಷೇರುದಾರರುಗಳ ಹಣಕಾಸು:		
ಎ) ಷೇರು ಬಂಡವಾಳ	1	10,00,000.00
ಬಿ) ಮೀಸಲಿರಿಸಿರುವಿಕೆಗಳು ಮತು ಮಿಗುತಾಯಗಳು	2	26,673.91
2) ಚಾಲ್ತಿಯೇತರ ಜವಾಬ್ದಾರಿಗಳು		
ಇತರೆ ದೀರ್ಘಾವಧಿ ಜವಾಬ್ದಾರಿಗಳು	3	2,17,31,68,322.05
3) ಚಾಲ್ತಿ ಜವಾಬ್ದಾರಿಗಳು:		
ಎ) ಇತರೆ ಚಾಲ್ತಿ ಜವಾಬ್ದಾರಿಗಳು	4	49,62,034.91
ಬಿ) ಅಲ್ಪಾವಧಿ ಅನುವುಗಳು	5	3,56,764.00
		2,17,95,13,794.87
ಆಸ್ತಿಗಳು:		
1) ಚಾಲ್ತಿಯೇತರ ಆಸ್ತಿಗಳು:		
ಎ) ಸ್ಥಿರಾಸ್ತಿಗಳು:		
i) ಗೋಚರ/ಸ್ಪರ್ಶಿಸಬಹುದಾದ ಆಸ್ತಿಗಳು	6	45,45,880.00
2) ಚಾಲ್ತಿ ಆಸ್ತಿಗಳು:		
ಎ) ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	7	2,726.00
ಬಿ) ನಗದು ಮತ್ತು ನಗದಿಗೆ ಸಮಾನವಾದವುಗಳು	8	2,16,09,82,358.91
ಸಿ) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು	9	25,000.00
ಡಿ) ಇತರೆ ಚಾಲ್ತಿ ಆಸ್ತಿಗಳು	10	1,39,57,829.96
		2,17,95,13,794.87
ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	16	
ಹಣಕಾಸು ತಃಖ್ತೆಗಳಿಗೆ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳನ್ನು ಗಮನಿಸುವುದು	17	

--ಸಹಿ ಮಾಡಲಾಗಿದೆ--
ಮೊಹಮ್ಮದ್ ನಝೀರ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07701205
25.06.2018, ಮಂಗಳೂರು

--ಸಹಿ ಮಾಡಲಾಗಿದೆ—
ಎಂ. ಶಶಿಧರ್ ಹೆಗ್ಡೆ
ನಿರ್ದೇಶಕರು
ಡಿಐಎನ್: 07742390
25.06.2018, ಮಂಗಳೂರು

ನಮ್ಮ ಅದೇ ದಿನಾಂಕದ ವರದಿಯ ಷರತ್ತಿಗೆ ಒಳಪಟ್ಟಂತೆ

ಕಾಮತ್ ಅಂಡ್ ರಾವ್, ಇವರಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
--ಸಹಿ ಮಾಡಲಾಗಿದೆ—
(ಶ್ರೀನಿವಾಸ್ ಎಸ್. ಕಾಮತ್, ಪಾಲುದಾರರು)

ಮಂಗಳೂರು
5 ಸೆಪ್ಟಂಬರ್ 2018

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು74999ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಲಾಭ ಮತ್ತು ನಷ್ಟ ತ:ಖ್ತೆ

(ರೂಪಾಯಿಗಳಲ್ಲಿ)

ವಿವರಗಳು		ಟಿಪ್ಪಣಿ ಸಂಖ್ಯೆ	06 ಏಪ್ರಿಲ್ 2017ರಿಂದ 31 ಮಾರ್ಚ್ 2018 ರಲ್ಲಿದ್ದಂತೆ
I	ಕಾರ್ಯಾಚರಣೆಗಳಿಂದ ವರಮಾನ		-
II	ಇತರೆ ವರಮಾನ	11	2,86,99,074.81
III	**ಒಟ್ಟು ವರಮಾನ (I+ II)**		**2,86,99,074.81**
IV	**ವೆಚ್ಚಗಳು:**		
	ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳ ವೆಚ್ಚಗಳು	12	11,21,174.00
	ಸವಕಳಿ ಮತ್ತು ಮೂಲಬೆಲೆಯನ್ನು ಕ್ರಮೇಣ ಕಳೆಯುವಿಕೆಗಳಿಗೆ ಸಂಬಂಧಿತ ವೆಚ್ಚಗಳು	6	13,35,222.00
	ಹಣಕಾಸು/ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ವೆಚ್ಚಗಳು	13	663.90
	ಇತರೆ ವೆಚ್ಚಗಳು	14	2,62,06,092.00
	ಒಟ್ಟು ವೆಚ್ಚಗಳು		**2,86,63,151.90**
V	ತೆರಿಗೆ ಪಾವತಿಗೆ ಮುಂಚಿನ ಲಾಭ/(ನಷ್ಟ)		35,922,91
VI	ತೆರಿಗೆ ವೆಚ್ಚಗಳು		
	1) ಚಾಲ್ತಿ ತೆರಿಗೆ	15	9,249.00
	2) ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿ		-
VII	ಪ್ರಸಕ್ತ ಸಾಲಿಗೆ (2017-18) ಲಾಭ/(ನಷ್ಟ)		26,673.91
VIII	ಈಕ್ವಿಟಿ ಷೇರು ಒಂದರ ಗಳಿಗೆಗಳು		
	1) ಮೂಲ		2.67
	2) ದುರ್ಬಲಗೊಳಿಸಲ್ಪಟ್ಟ (ಡೈಲ್ಯೂಟೆಡ್)		2.67
	ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು	16	
	ಹಣಕಾಸು ತ:ಖ್ತೆಗಳಿಗೆ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳನ್ನು ಗಮನಿಸುವುದು	17	

--ಸಹಿ ಮಾಡಲಾಗಿದೆ--
ಮೊಹಮ್ಮದ್ ನಝೀರ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 07701205
25.06.2018, ಮಂಗಳೂರು

--ಸಹಿ ಮಾಡಲಾಗಿದೆ—
ಎಂ. ಶಶಿಧರ್ ಹೆಗ್ಡೆ
ನಿರ್ದೇಶಕರು
ಡಿಐಎನ್ : 07742390
25.06.2018, ಮಂಗಳೂರು

ನಮ್ಮ ಅದೇ ದಿನಾಂಕದ ವರದಿಯ ಷರತ್ತಿಗೆ ಒಳಪಟ್ಟಂತೆ

ಕಾಮತ್ ಅಂಡ್ ರಾವ್, ಇವರಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
--ಸಹಿ ಮಾಡಲಾಗಿದೆ—
(ಶ್ರೀನಿವಾಸ್ ಎಸ್. ಕಾಮತ್, ಪಾಲುದಾರರು)

ಮಂಗಳೂರು
5 ಸೆಪ್ಟಂಬರ್ 2018

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು74999ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ರಲ್ಲಿದ್ದಂತೆ ನಗದು/ಹಣಕಾಸು ಹರಿವಿನ ತಃಖ್ತೆ

(ರೂಪಾಯಿಗಳಲ್ಲಿ)

ವಿವರಗಳು	06.04.2017ರಿಂದ 31.03.2018ರವರೆಗಿನ ಅವಧಿಗೆ	
ಕಾರ್ಯಾಚರಣೆ ಚಟುವಟಿಕೆಗಳಿಂದ ಹಣಕಾಸಿನ ಹರಿವು (ಎ)		
ತೆರಿಗೆಗೆ ಮುಂಚಿನ ನಿವ್ವಳ ಲಾಭ್ ಹಾಗೂ ಅಸಾಧಾರಣ ಬಾಬುಗಳು		35,922.91
ಸವಕಳಿಗಾಗಿ ಹೊಂದಾಣಿಕೆ		13,35,222.00
ಕಳೆಯುವುದು : ಬಡ್ಡಿ ವರಮಾನ		(35,922.91)
ಕಾರ್ಯೋದ್ಯುಕ್ತ ಬಂಡವಳ ವೆಚ್ಚಗಳಿಗೆ ಮುಂಚೆ ಕಾರ್ಯಾಚರಣೆಗಳಿಂದ ಲಾಭ		13,35,222.00
ಚಾಲ್ತಿ ಜವಾಬ್ದಾರಿಗಳಲ್ಲಿ ಹೆಚ್ಚಳ/(ಇಳಿಕೆ)		49,62,034.91
ಅಲ್ಪಾವಧಿ ಅನುವುಗಳಿಂದ ಹೆಚ್ಚಳ /(ಇಳಿಕೆ)		3,56,764.00
ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳಿಂದ ಇಳಿಕೆ /(ಹೆಚ್ಚಳ)		(25,000.00)
ಸಾಲಗಾರರಲ್ಲಿ ಇಳಿಕೆ/(ಹೆಚ್ಚಳ)		(2,726.00)
ಕಾರ್ಯಾಚರಣೆಗಳಿಂದ ಉತ್ಪತ್ತಿ ಮಾಡಲಾದ ನಗದು/ಹಣಕಾಸು		66,26,294.91
ಆದಾಯ ತೆರಿಗೆ		(9,249.00)
ಕಾರ್ಯಾಚರ್ಣೆಗಳ ಚಟುವಟಿಕೆಗಳಲ್ಲಿ ಬಳಸಲಾದ ನಿವ್ವಳ ನಗದು/ಹಣಕಾಸು		**66,17,045.91**
<u>ಹೂಡಿಕೆ ಚಟುವಟಿಕೆಗಳಿಂದ ನಗದು/ಹಣಕಾಸಿನ ಹರಿವು</u>		
ಖರೀದಿಸಲಾದ ಸ್ಥಿರಾಸ್ತಿಗಳ ಮೌಲ್ಯ		(58,81,102.00)
ಸ್ವೀಕರಿಸಲಾದ ಬಡ್ಡಿ	35,922.91	
ಮೀಸಲಿರಿಸಿರುವ ಯೋಜನಾ ಹಣಕಾಸಿನ ಮೇಲೆ ಗಳಿಸಲಾದ ಬಡ್ಡಿ	5,31,68,322.05	
	5,32,04,244.96	
ಕಳೆಯುವುದು : ಸಂಚಿತಗೊಂಡಿರುವ ಆದರೆ ಸ್ವೀಕರಿಸಬೇಕಿಲ್ಲದ ಬಡ್ಡಿ	1,39,57,829.96	3,92,46,415.00
ಹೂಡಿಕೆ ಚಟುವಟಿಕೆಗಳಲ್ಲಿ ಬಳಸಾದ ನಗದು/ಹಣಕಾಸು		3,33,65,313.00
<u>ಹಣಕಾಸು ಸಂಬಂಧಿತ ಚಟುವಟಿಕೆಗಳಿಂದ ನಗದು/ಹಣಕಾಸಿನ ಹರಿವು</u>		–
ಷೇರು ಬಂಡವಾಳ ನೀಡಿಕೆಯಿಂದ ಬಂದಂತಹ ನಗದು/ಹಣಕಾಸಿನ ಹರಿವು		10,00,000.00
ಈಕ್ವಿಟಿಯ ಕಡೆಗೆ ಷೇರುದಾರರುಗಳಿಂದ ಸ್ವೀಕರಿಸಲಾದ ಹಣಕಾಸಿನ ಕಾಣಿಕೆ		
ಭಾರತ ಸರ್ಕಾರದಿಂದ ಸ್ವೀಕರಿಸಲಾದ ಅನುದಾನ	2,17,31,68,322.05	
ಕಳೆಯುವುದು : ಯೋಜನಾ ಹಣಕಾಸಿನ ಕಡೆಗೆ	5,31,68,322.05	2,12,00,00,000.00

ಮೀಸಲಿರಿಸಿದ್ದ ಹಣಕಾಸಿನ ಮೇಲೆ ಸ್ವೀಕರಿಸಲಾದ ಬಡ್ಡಿ		
ಹಣಕಾಸು ಸಂಬಂಧಿತ ಚಟುವಟಿಕೆಗಳಲ್ಲಿ ಬಳಸಲಾದ ನಿವ್ವಳ ಹಣಕಾಸು/ನಗದು		**2,12,10,00,000.00**
ನಗದು ಮತ್ತು ನಗದಿಗೆ ಸಮಾನವಾದವುಗಳಲ್ಲಿ ನಿವ್ವಳ ಹೆಚ್ಚಳ		**2,16,09,82,358.91**
ಅವಧಿಯ (2017–18) ಪ್ರಾರಂಭದಲ್ಲಿನ ನಗದು ಮತ್ತು ನಗದಿಗೆ ಸಮಾನವಾದವುಗಳು ಖಾತೆ ಸಂಖ್ಯೆ 52010123547923 1	–	–
		2,16,09,82,358.91
ಅವಧಿಯ (2017–18) ಅಂತ್ಯದಲ್ಲಿನ ನಗದು ಮತ್ತು ನಗದಿಗೆ ಸಮಾನವಾದವುಗಳು ಖಾತೆ ಸಂಖ್ಯೆ 52010123547923 1		**2,16,09,82,358.91**

--ಸಹಿ ಮಾಡಲಾಗಿದೆ--
ಮೊಹಮ್ಮದ್ ನಝೀರ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 07701205
25.06.2018, ಮಂಗಳೂರು

--ಸಹಿ ಮಾಡಲಾಗಿದೆ—
ಎಂ. ಶಶಿಧರ್ ಹೆಗ್ಡೆ
ನಿರ್ದೇಶಕರು
ಡಿಐಎನ್ : 07742390
25.06.2018, ಮಂಗಳೂರು

ನಮ್ಮ ಅದೇ ದಿನಾಂಕದ ವರದಿಯ ಷರತ್ತಿಗೆ ಒಳಪಟ್ಟಂತೆ

ಕಾಮತ್ ಅಂಡ್ ರಾವ್, ಇವರಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್

ಮಂಗಳೂರು
5 ಸೆಪ್ಟಂಬರ್ 2018

--ಸಹಿ ಮಾಡಲಾಗಿದೆ—
(ಶ್ರೀನಿವಾಸ್ ಎಸ್. ಕಾಮತ್, ಪಾಲುದಾರರು)

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು74999ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ತಃಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ –1 ಷೇರು ಬಂಡವಾಳ		
ಅಧಿಕೃತ		
ಪ್ರತಿಯೊಂದು ಷೇರಿಗೂ ರೂ.100/–ರಂತೆ 2,00,00,000 ಈಕ್ವಿಟಿ ಷೇರುಗಳು		**2,00,00,00,000**
ಹಂಚಿಕೆ ಮಾಡಲಾಗಿರುವ, ಅಂತಹ ಷೇರುಗಳಿಗೆ ಚಂದಾದಾರರಾಗುವುದಾಗಿ ಒಪ್ಪಿಕೊಂಡಿರುವ ಹಾಗೂ ಪಾವತಿಸಿರುವ ಷೇರುಗಳು :		
ಪ್ರತಿಯೊಂದು ಷೇರಿಗೂ ರೂ.100/–ರಂತೆ 10,000 ಈಕ್ವಿಟಿ ಷೇರುಗಳು		**10,00,000.00**

ಷೇರು ಬಂಡವಾಳವನ್ನು ಸಮನ್ವಯಗೊಳಿಸುವಿಕೆ

ವಿವರಗಳು	31.03.2018ಕ್ಕೆ ಅಂತ್ಯಗೊಂಡ ಅವಧಿಗೆ
ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾದ ಷೃಗಳು	10,000
ಅಂತಿಮ ಶಿಲ್ಕು (ಷೇರುಗಳ ಸಂಖ್ಯೆ)	10,000

ಕಂಪನಿಯಲ್ಲಿನ ಒಟ್ಟಾರೆ ಈಕ್ವಿಟಿ ಷೇರುಗಳ ಪೈಕಿ ಶೇಕಡಾ 5ಕ್ಕಿಂತ ಅಧಿಕ ಷೇರುಗಳನ್ನು ಹೊಂದಿರುವ ಷೇರುದಾರರ ವಿವರಗಳು

ಷೇರುದಾರರ ಹೆಸರು	31.03.2018ಕ್ಕೆ ಅಂತ್ಯಗೊಂಡ ಅವಧಿಗೆ	
	ಷೇರುಗಳ ಸಂಖ್ಯೆ	ಶೇಕಡಾವಾರು ಹಿಡುವಳಿ
ಕರ್ನಾಟಕ ಸರ್ಕಾರ	5,000	50.00%
ಮಂಗಳೂರು ಮಹಾನಗರ ಪಾಲಿಕೆ	4,994	49.94%

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ –2 ಮೀಸಲಿರಿಸಿರುವಿಕೆಗಳು ಮತ್ತು ಮಿಗುತಾಯಗಳು		
ಲಾಭ ಮತ್ತು ನಷ್ಟ ತಃಖ್ತೆ	–	–
ಕೂಡುವುದು : ಪ್ರಸಕ್ತ ಸಾಲಿನ ಲಾಭ	26,673.91	26,673.91
		26,673.91

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ –3 ಇತರೆ ದೀರ್ಘಾವಧಿ ಜವಾಬ್ದಾರಿಗಳು		
ಭಾರತ ಸರ್ಕಾರದಿಂದ ಸ್ವೀಕರಿಸಲಾಗಿರುವ ಷರತ್ತುಬದ್ಧ ಅನುದಾನ		1,07,00,00,000.00
ಕರ್ನಾಟಕ ಸರ್ಕಾರದಿಂದ ಸ್ವೀಕರಿಸಲಾಗಿರುವ ಷರತ್ತುಬದ್ಧ ಅನುದಾನ		1,05,00,00,00,000
ಷರತ್ತುಬದ್ಧ ಅನುದಾನಗಳ ಠೇವಣಿ ಮೇಲೆ ಪಡೆಯಲಾದ ಬಡ್ಡಿ		5,31,68,322.05
		2,17,31,68,322.05

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ –4 ಇತರೆ ಚಾಲ್ತಿ ಜವಾಬ್ದಾರಿಗಳು		
ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ ಮೂಲಕ ಎಸ್‌ಸಿಪಿ ತಯಾರಿಕೆಗಾಗಿ ಸ್ವೀಕರಿಸಲಾದ ಹಣಕಾಸು	1,00,00,000.00	
ಕಳೆಯುವುದು : ಈಕ್ವಿಟಿ ಷೇರು ಬಂಡವಾಳಕ್ಕೆ ವರ್ಗಾಯಿಸಲಾದ ಮೊತ್ತ	5,00,000.00	95,00,000.00
ಭಾರತ ಸರ್ಕಾರದಿಂದ ಸ್ವೀಕರಿಸಲಾದ ಎ ಅಂಡ್ ಓಇ ಅನುದಾನ	2,00,00,000.00	
ಕಳೆಯುವುದು : ಈಕ್ವಿಟಿ ಷೇರು ಬಂಡವಾಳಕ್ಕೆ ವರ್ಗಾಯಿಸಲಾದ ಮೊತ್ತ	5,00,000.00	1,95,00,00,000.00
		2,90,00,000.00
ಕೂಡುವುದು : ಮಹಾನಗರ ಪಾಲಿಕೆಯಿಂದ ಸ್ವೀಕರಿಸಲಾದ ಅನುದಾನ		46,25,186.81
		3,36,25,186.81
ಕಳೆಯುವುದು : ಬಳಸಿಕೊಳ್ಳಲಾದ ವರಮಾನ ಅನುದಾನಗಳು		2,86,63,151.90
		49,62,034.91

ಟಿಪ್ಪಣಿಗಳು :

1. ಎ ಅಂಡ್ ಓಇ (ಜಿಐಎಸ್ ತಂತ್ರಾಂಶ ಅನ್ವಯ) ಕಡೆಗೆ ಹೊಂದಿರುವ ಉಳಿಕೆ ಮೊತ್ತ: ರೂ. 45,45,880.00
ಎ ಅಂಡ್ ಓಇ ಕಡೆಗೆ ಹೊಂದಲಾಗಿರುವ ಉಳಿಕೆ ಮೊತ್ತ: 4,16,154.91
49,62,034.91

2.ಭಾರತ ಸರ್ಕಾರದಿಂದ ಸ್ವೀಕರಿಸಲಾದ ಅನುದಾನಕ್ಕೆ ಸಂಬಂಧಿಸಿದಂತೆ ರೂ.1,00,00,000/–ದಷ್ಟು ಮೊತ್ತವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಪಾವತಿಸಲಾಯಿತು. ಮಂಗಳೂರು ಮಹಾನಗರ ಪಾಲಿಕೆಯು ಸ್ಮಾರ್ಟ್ ಸಿಟಿ ಕಂಪನಿಯನ್ನು ಸ್ಥಾಪಿಸುವುದಕ್ಕೆ ಮುಂಚಿತವಾಗಿ ಸ್ಮಾರ್ಟ್ ಸಿಟಿ ಪ್ರಸ್ತಾವನೆಗಳನ್ನು ತಯಾರಿಸುವ ಸಲುವಾಗಿ ವೆಚ್ಚಗಳನ್ನು ಭರಿಸಿದ್ದಿತು. ಉಳಿಕೆ ರೂ.46,25,186.81ರಷ್ಟು ಮೊತ್ತವನ್ನು ಮಂಗಳೂರು ಮಹಾನಗರ ಪಾಲಿಕೆಯು ಸ್ಮಾರ್ಟ್ ಸಿಟಿ ಕಂಪನಿಯ ಖಾತೆಗೆ ವರ್ಗಾಯಿಸಿರುವುದು ಹಾಗೂ ಅದನ್ನು ಬಳಸಿಕೊಳ್ಳಲಾಗಿರುವುದು.

3. ಕನಮೂಅಹನಿದಿಂದ ಸ್ವೀಕರಿಸಲಾದಂತಹ ರೂ.1,00,00,000/– ಮೊತ್ತದಷ್ಟು ಅನುದಾನದ ಪೈಕಿ ಕಂಪನಿಯು ರೂ.5,00,000/– ಮೊತ್ತದಷ್ಟು ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡಿರುವುದು ಹಾಗೂ ಉಳಿದ ಮೊತ್ತವನ್ನು ವೆಚ್ಚಗಳಿಗಾಗಿ ಬಳಸಿಕೊಳ್ಳಲಾಗಿರುವುದು.

4. ಭಾರತ ಸರ್ಕಾರವು ಬಿಡುಗಡೆಗೊಳಿಸಿರುವ ರೂ.2,00,00,000/- ಮೊತ್ತದಷ್ಟು ಎ ಅಂಡ್ ಒಇ ಅನುದಾನಕ್ಕೆ ಸಂಬಂಧಿಸಿದಂತೆ, ಕಂಪನಿಯು ರೂ.5,00,000/- ಮೊತ್ತದಷ್ಟು ಈಕ್ವಿಟಿ ಷೇರು ಬಂಡವಾಳವನ್ನು ಹಂಚಿಕೆ ಮಾಡಿರುವುದು ಹಾಗೂ ರೂ.1,45,37,965.09/-ರಷ್ಟು ಮೊತ್ತವನ್ನು ಬಳಸಿಕೊಳ್ಳಲಾಗಿರುವುದು.

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		**31 ಮಾರ್ಚ್ 2018 ರಲ್ಲಿದ್ದಂತೆ**
ಟಿಪ್ಪಣಿ -5 ಅಲ್ಪಾವಧಿ ಅನುವುಗಳು		
ಪಾವತಿಸಬೇಕಿರುವ ಸಂಬಳ		2,29,928.00
ಸಂಬಂಧಿತ ಇಲಾಖೆಗಳಿಗೆ ಪಾವತಿಸಬೇಕಿರುವ ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆ		30,547.00
ನಿರ್ದೇಶಕರುಗಳ ಸಭೆಗೆ ಹಾಜರಾದುದಕ್ಕಾಗಿ ನಿರ್ದೇಶಕರುಗಳಿಗೆ ಪಾವತಿಸಬೇಕಿರುವ ಶುಲ್ಕಗಳು		33,040.00
ಪಾವತಿಸಬೇಕಿರುವ ಲೆಕ್ಕಪರಿಶೋಧನಾ ಶುಲ್ಕ		54,000.00
ಆದಾಯ ತೆರಿಗೆ ಪಾವತಿಗಾಗಿ ಅನುವು		9,249.00
		3,56,764.00

ಟಿಪ್ಪಣಿ-6

ಕಂಪನಿಗಳ ಅಧಿನಿಯಮ, 2013ರ ಅನುಸಾರ ಭೂಮಿ/ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳ ಷೆಡ್ಯೂಲು.

ಸ್ಪರ್ಶಿಸಬಹುದಾದ/ಗೋಚರ ಆಸ್ತಿಗಳು

ಆಸ್ತಿಗಳ ವಿವರಗಳು	**ಪ್ರಸಕ್ತ ಸಾಲಿನಲ್ಲಿ ಸೇರ್ಪಡೆಗಳು (ಕಳೆಯುವಿಕೆಗಳು)**	**31.3.2018ರಲ್ಲಿದ್ದಂತೆ ಒಟ್ಟಾರೆ ಮೌಲ್ಯ**	**ಪ್ರಸಕ್ತ ಸಾಲಿನಲ್ಲಿ ದಾಖಲೆಗಳಿಂದ ತೆಗೆದುಹಾಕಿರುವುದು (ರಿವರ್ಸ್ ಆಫ್) (ಹಿಂಪಡೆದು ಕೊಂಡಿರುವುದು**	**31.3.2018 ರವರೆಗೆ ದಾಖಲೆಗಳಿಂದ ತೆಗೆದುಹಾಕಿರುವುದು (ರಿವರ್ಸ್ ಆಫ್) (ಹಿಂಪಡೆದು ಕೊಂಡಿರುವುದು**	**31.3.2018 ರಲ್ಲಿದ್ದಂತೆ ನಿವ್ವಳ ಬ್ಲಾಕು**
ಪೀಠೋಪಕರಣಗಳು ಮತ್ತು ನೆಲೆವಸ್ತುಗಳು	22,420.00	22,420.00	344.00	344.00	22,076.00
ತಂತ್ರಾಂಶ ಅನ್ವಯಿಗಳು	58,58,682.00	58,58,682.00	13,34,878.00	13,34,878.00	45,23,804.00
	58,81,102.00	58,81,102.00	13,35,222,00	13,35,222.00	45,45,880.00

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		**31 ಮಾರ್ಚ್ 2018 ರಲ್ಲಿದ್ದಂತೆ**
ಟಿಪ್ಪಣಿ -7 ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಿರುವವುಗಳು - ವಸೂಲಾತಿ ಮಾಡಲು ಉತ್ತಮ ಸ್ಥಿತಿಯಲ್ಲಿರುವುದಾಗಿ ಪರಿಗಣಿಸಲಾಗಿರುವುದು		
6 ತಿಂಗಳುಗಳಿಗೂ ಮೀರಿದಂತೆ ಬಾಕಿಯಿರುವ ಸಾಲಗಳು		-
ಇತರೆ ಸಾಲಗಳು:		
ಮೂಲದಲ್ಲಿಯೇ ಕಡಿದುಕೊಳ್ಳಲಾಗಿರುವ ತೆರಿಗೆಗಳು - ಸ್ವೀಕರಿಸಬೇಕಾಗಿರುವುದು		2,726.00
		2,726.00

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 8 ನಗದು ಮತ್ತು ನಗದಿಗೆ ಸಮಾನವಾದವುಗಳು		
ಕಚೇರಿಯಲ್ಲಿರುವ ನಗದು		–
ಬ್ಯಾಂಕಿನಲ್ಲಿರುವ ನಗದು		
ಕಾರ್ಪೋರೇಷನ್ ಬ್ಯಾಂಕು ಉಳಿತಾಯ ಖಾತೆ ಸಂಖ್ಯೆ 520101235544792 31		2,16,09,82,358.91
		2,16,09,82,358.91

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 9 ಅಲ್ಪಾವಧಿ ಸಾಲಗಳು ಹಾಗೂ ಮುಂಗಡಗಳು (ಭದ್ರತೆಯಿಂದ ಕೂಡಿರದ, ಆದರೆ ವಸೂಲಾತಿ ಮಾಡಲು ಉತ್ತಮ ಸ್ಥಿತಿಯಲ್ಲಿರುವುದಾಗಿ ಪರಿಗಣಿಸಲಾಗಿರುವ)		
ಮುಂಗಡ		25,000.00

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 10 ಇತರೆ ಚಾಲ್ತಿ ಆಸ್ತಿಗಳು		
ಸಂಚಿತಗೊಂಡಿರುವ, ಆದರೆ ಪಡೆಯಲು ಬಾಕಿಯಿರದ ಬಡ್ಡಿ (ಉಳಿತಾಯ ಖಾತೆಯ ಮೇಲೆ)		1,39,57,829.96

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 11 ಇತರೆ ವರಮಾನ		
ಬಳಸಿಕೊಳ್ಳಲಾಗಿರುವ ವರಮಾನ ಅನುದಾನಗಳು		2,86,63,151.90
ಸ್ವೀಕರಿಸಲಾಗಿರುವ ಬಡ್ಡಿ		35,922.91
		2,86,99,074.81

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 12 ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳ ವೆಚ್ಚ		
ಸಿಬ್ಬಂದಿ ಸಂಬಳ		**11,21,174.00**

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 13 ಹಣಕಾಸು/ಸಾಲಗಳ ಸಂಬಂಧಿತ ವೆಚ್ಚಗಳು		
ಬ್ಯಾಂಕು ಶುಲ್ಕಗಳು		**663.90**

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 14 ಇತರೆ ವೆಚ್ಚಗಳು		
ಜಾಹೀರಾತು		1,52,669.00
ಸಲಹಾ ಶುಲ್ಕಗಳು		82,76,625.00
ವೆಚ್ಚಗಳ ಮೇಲೆ ಪಾವತಿಸಲಾದ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ		6,815.00
ಕಂಪನಿಯ ಸಂಸ್ಥಾಪನೆಗೆ ಸಂಬಂಧಿತ ವೆಚ್ಚಗಳು		1,71,33,820.00
ಸಭಾ ವೆಚ್ಚಗಳು		62,997.00
ಲೆಕ್ಕಪರಿಶೋಧಕರುಗಳಿಗೆ ಸಂಭಾವನೆ		
ಲೆಕ್ಕಪರಿಶೋಧನಾ ಶುಲ್ಕ		59,000.00
ಮುದ್ರಣ ಮತ್ತು ಲೇಖನ ಸಾಮಗ್ರಿ		71,015.00
ನಿರ್ದೇಶಕರುಗಳ ಮಂಡಳಿಯ ಸಭೆಗೆ /ಸಮಿತಿಯ ಸಭೆಗೆ ಹಾಜರಾದುದಕ್ಕಾಗಿ ಶುಲ್ಕಗಳು		65,040.00
ಪ್ರವಾಸ ವೆಚ್ಚಗಳು		3,78,111.00
		2,62,06,092.00

(ಅಂಕಿಸಂಖ್ಯೆಗಳು ರೂಪಾಯಿಗಳಲ್ಲಿ)

ವಿವರಗಳು		31 ಮಾರ್ಚ್ 2018 ರಲ್ಲಿದ್ದಂತೆ
ಟಿಪ್ಪಣಿ – 15 ತೆರಿಗೆ ವೆಚ್ಚಗಳು		
ಚಾಲ್ತಿ ತೆರಿಗೆ :		
ಚಾಲ್ತಿ ಆದಾಯ ತೆರಿಗೆ ವೆಚ್ಚಗಳು		9,249.00
ಪೂರ್ವಾವಧಿಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆಗಳು		–
ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿ		
ಪ್ರಸಕ್ತ ಸಾಲಿನ ಉದ್ಭವ ಹಾಗೂ ತಾತ್ಕಾಲಿಕ ವ್ಯತ್ಯಾಸಗಳ ನಮೂದುಗಳನ್ನು ಹಿಂದುಮುಂದು ಮಾಡಿರುವುದಕ್ಕೆ ಸಂಬಂಧಿಸಿರುವುದು		–
		9,249.00

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು74999ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ತ:ಖ್ತೆಗಳಿಗೆ ಟಿಪ್ಪಣಿಗಳು

ಟಿಪ್ಪಣಿ – 16 ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು

ಸಾಂಸ್ಥಿಕ ಮಾಹಿತಿ

ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತವು ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಭಾರತದಲ್ಲಿ ಕಲ್ಪಿತಗೊಂಡು ಹಾಗೂ ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಒಂದು ಸಾರ್ವಜನಿಕ (ಪಬ್ಲಿಕ್) ಕಂಪನಿಯಾಗಿರುತ್ತದೆ. ಕಂಪನಿಯ ನೋಂದಾಯಿತ ಕಚೇರಿಯು, ಮಂಗಳೂರು ಮಹಾನಗರ ಪಾಲಿಕೆ ಕಚೇರಿ, ಪ್ರಧಾನ ಕಟ್ಟಡ, ಮಹಾತ್ಮಾ ಗಾಂಧಿ ರಸ್ತೆ, ಲಾಲ್‌ಬಾಗ್, ಮಂಗಳೂರು, ಈ ವಿಳಾಸದಲ್ಲಿರುವುದು. ಮಂಗಳೂರು ಸ್ಮಾರ್ಟ್ ಸಿಟಿ ನಿಯಮಿತವು ಮಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಭಾರತ ಸರ್ಕಾರದ ಸ್ಮಾರ್ಟ್ ಸಿಟಿ ಅಭಿಯಾನದ (ಮಿಷನ್) ಅಡಿಯಲ್ಲಿ ರಚಿತಗೊಂಡಿರುವಂತಹ ಒಂದು ವಿಶೇಷ ಉದ್ದೇಶದ ವಾಹಕವಾಗಿರುತ್ತದೆ (ಎಸ್‌ಪಿವಿ). ಮಂಗಳೂರು ಸ್ಮಾರ್ಟ್ ಸಿಟಿ ಅಭಿಯಾನದ (ಮಿಷನ್) ಪ್ರಮುಖ ಉದ್ದೇಶಗಳೆಂದರೆ ಮಂಗಳೂರಿನ ಜನತೆಗೆ ಸ್ವಚ್ಛ ಹಾಗೂ ಉರ್ಜಿತಗೊಳ್ಳಬಲ್ಲಂತಹ ಪರಿಸರ ಹಾಗೂ ಅಚ್ಚುಕಟ್ಟಾದ (ಸ್ಮಾರ್ಟ್) ಅನುಕೂಲತೆಗಳೊಂದಿಗೆ ಪ್ರಮುಖ ಮೂಲಸೌಕರ್ಯಗಳನ್ನು ಒದಗಿಸುವುದಾಗಿರುತ್ತದೆ.

ಕಂಪನಿಯನ್ನು 6 ಏಪ್ರಿಲ್ 2017ರಂದು ಸ್ಥಾಪಿಸಲಾಯಿತು. ಅಧಿನಿಯಮದ ಅಗತ್ಯತೆಯಂತೆ ಕಂಪನಿಯ ಪ್ರಪ್ರಥಮ ಹಣಕಾಸು ತ:ಖ್ತೆಗಳನ್ನು 6 ಏಪ್ರಿಲ್ 2017ರಿಂದ 31 ಮಾರ್ಚ್ 2018ರ ಅವಧಿಗೆ ಮಂಡಿಸಲಾಗಿರುವುದು.

ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳು:

1. **ಸಾಮಾನ್ಯ:**

   i) **ತಯಾರಿಕೆಗೆ ಮತ್ತು ಮಂಡನೆಗೆ ಆಧಾರ:** ಈ ಕೆಳಗೆ ವಿವರಿಸಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳಲ್ಲಿ ವಿವರಿಸಲಗಿರುವಂತೆ ಪ್ರತಿಯೊಂದು ವರದಿಗೆ ಸಂಬಂಧಿತ ಅವಧಿಯ ಅಂತ್ಯದಲ್ಲಿದ್ದಂತೆ ನ್ಯಾಯಸಮ್ಮತ ಮೌಲ್ಯಗಳಲ್ಲಿ ಲೆಕ್ಕಹಾಕುವುದನ್ನು ಹೊರತುಪಡಿಸಿದಂತೆ, ಹಣಕಾಸು ತ:ಖ್ತೆಗಳನ್ನು ಸಂಚಿತ ಆಧಾರದ ಮೇರೆಗೆ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಾಳ ಅಧಿನಿಯಮ 2013ರ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತಹ (ಅಧಿಸೂಚನೆ ನೀಡಲ್ಪಟ್ಟಿರುವಷ್ಟರ ಮಟ್ಟಿಗೆ) ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ಮೂಲ ಸಾಂಪ್ರದಾಯಿಕ ಮೌಲ್ಯಗಳಲ್ಲಿ ತಯಾರಿಸಲಾಗುವುದು. ಸಾಂಪ್ರದಾಯಿಕ ಮೂಲ ವೆಚ್ಚವು/ಮೌಲ್ಯವು ಸಾಮಾನ್ಯವಾಗಿ ಸರಕುಗಳು ಮತ್ತು ಸೇವೆಗಳ ವಿನಿಮಯದಲ್ಲಿ ನೀಡಲಾಗುವ ಪ್ರತಿಫಲದ ನ್ಯಾಯಸಮ್ಮತ ಹಣಕಾಸಿನ ಮೌಲ್ಯವಾಗಿರುತ್ತದೆ.

   ii) **ಅಂದಾಜುಗಳ ಬಳಕೆ:** ವ್ಯವಸ್ಥಾಪನೆಯು/ಆಡಳಿತ ಮಂಡಳಿಯು, ಹಣಕಾಸು ವರ್ಷದ ಅಂತ್ಯದಲ್ಲಿ ವರದಿ ಮಾಡಲ್ಪಟ್ಟಿರುವ ಆದಾಯ/ವರಮಾನಗಳು, ವೆಚ್ಚಗಳು, ಆಸ್ತಿಗಳು ಮತ್ತು ಜವಾಬ್ದಾರಿಗಳು, ಆಕಸ್ಮಿಕ ಜವಾಬ್ದಾರಿಗಳ ಮೊತ್ತಗಳ ಮೇಲೆ ಪರಿಣಾಮ ಭೀರುವಂತಹ ತೀರ್ಮಾನಗಳು, ಅಂದಾಜುಗಳು ಹಾಗೂ ಕಲ್ಪನೆಗಳನ್ನು ಮಾಡುವುದನ್ನು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಣಕಾಸು ತ:ಖ್ತೆಗಳನ್ನು ತಯಾರಿಸುವಿಕೆಯು ಅಗತ್ಯತೆಯನ್ನು ಹೊಂದಿರುತ್ತದೆ. ವಾಸ್ತವಿಕ ಫಲಿತಾಂಶಗಳು

ಅಂತಹ ಅಂದಾಜುಗಳಿಗೆ ಹೋಲಿಸಿದಂತೆ ವ್ಯತ್ಯಯದಿಂದ ಕೂಡಿರುತ್ತವೆ ಹಾಗೂ ಮೂಲಾಧಾರವಾಗಿರುವ ಪರಿಕಲ್ಪನೆಗಳನ್ನು ದೈನಂದಿನ ಆಧಾರದ ಮೇರೆಗೆ ಸಮೀಕ್ಷಿಸಲಾಗುವುದು. ಲೆಕ್ಕವನ್ನಿಡುವಿಕೆಯಲ್ಲಿನ ಅಂದಾಜುಗಳ ಯಾವುದೇ ಪರಿಷ್ಕರಣೆಯನ್ನು ಭವಿಷ್ಯಕ್ಕೆ ಅನ್ವಯಗೊಳ್ಳುವಂತೆ ಚಾಲ್ತಿ ಹಾಗೂ ಭವಿಷ್ಯದ ಅವಧಿಗೆ ಪರಿಗಣಿಸಲಾಗುವುದು.

ಅಂದಾಜುಗಳನ್ನು ಹಾಗೂ ಮೂಲಾಧಾರವಾಗಿರುವ ಪರಿಕಲ್ಪನೆಗಳನ್ನು ದೈನಂದಿನ ಆಧಾರದ ಮೇರೆಗೆ ಸಮೀಕ್ಷಿಸಲಾಗುವುದು. ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ಪರಿಷ್ಕರಣೆಗಳನ್ನು ಅಂದಾಜುಗಳನ್ನು ಪರಿಷ್ಕರಿಸಲಾದಂತಹ ಅವಧಿಯಲ್ಲಿ ಹಾಗೂ ಪರಿಣಾಮ ಬೀರುವಂತಹ ಭವಿಷ್ಯದ ಅವಧಿಗಳಲ್ಲಿ ಪರಿಗಣಿಸಲಾಗುವುದು. ಹಣಕಾಸು ತ:ಖ್ತೆಗಳಲ್ಲಿ ಬಳಸಿಕೊಳ್ಳಲಾಗಿರುವಂತಹ ಅಂದಾಜುಗಳು ವಿವೇಚನೆಯಿಂದ ಕೂಡಿರುತ್ತವೆ ಹಾಗೂ ನ್ಯಾಯಸಮ್ಮತವಾಗಿರುತ್ತವೆ ಎಂಬುದರ ಬಗ್ಗೆ ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ವಿಶ್ವಾಸವನ್ನಿಟ್ಟುಕೊಂಡಿರುತ್ತದೆ. ಈ ಅಂದಾಜುಗಳ ಕಾರಣದಿಂದ ಭವಿಷ್ಯದ ಫಲಿತಾಂಶಗಳು ವ್ಯತ್ಯಯದಿಂದ ಕೂಡಿರಬಹುದು ಹಾಗೂ ವಾಸ್ತವಿಕ ಫಲಿತಾಂಶ ಮತ್ತು ಅಂದಾಜುಗಳ ನಡುವಿನ ವ್ಯತ್ಯಾಸಗಳನ್ನು ಫಲಿತಾಂಶಗಳು ತಿಳಿದುಬಂದಂತಹ/ಸಾಕಾರಗೊಂಡಂತಹ ಅವಧಿಗಳಲ್ಲಿ ಪರಿಗಣಿಸಲಾಗುವುದು.

ಮುಂದಿನ ಹಣಕಾಸು ಸಾಲಿನ ಒಳಗೇ ಮೌಲ್ಯಗಳ ವಿಷಯಕ ಹೊಂದಾಣಿಕೆಗೆ ಕಾರಣವಾಗುವಂತಹ ಹಣಕಾಸು ತ:ಖ್ತೆಗಳ ದಿನಾಂಕದಂದು ಆಸ್ತಿಗಳು ಮತ್ತು ಜವಾಬ್ದಾರಿಗಳು ಹೊಂದಿರುವಂತಹ ಮೌಲ್ಯಗಳ ಅಂದಾಜಿನ ಪ್ರಮುಖ ಮೂಲವು ಕಟ್ಟಡ ಮುಂತಾದ ಆಸ್ತಿ, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳ ಬಳಸಬಹುದಾದಂತಹ ಅವಧಿ, ಮುಂದೂಡಲ್ಪಟ್ಟಿರುವ ತೆರಿಗೆ ಜವಾಬ್ದಾರಿಗಳು ಹಾಗೂ ಅನುವುಗಳು ಹಾಗೂ ಆಕಸ್ಮಿಕ ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ಆಗಿರುತ್ತದೆ.

ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳ ಬಳಸಬಹುದಾದ ಅವಧಿ

ಕಂಪನಿಯು ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳ ಬಳಸಬಹುದಾದ ಅವಧಿಯನ್ನು ಪ್ರತಿಯೊಂದು ವರದಿಗೆ ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಸಮೀಕ್ಷಿಸುತ್ತದೆ. ಈ ರೀತಿ ಮಾಡಲಾದಂತಹ ಪುನರ್-ನಿರ್ಧಾರಣೆಯು ಸವಕಳಿಗೆ ಸಂಬಂಧಿತ ವೆಚ್ಚವು ಭವಿಷ್ಯದ ಅವಧಿಗಳಲ್ಲಿ ಬದಲಾವಣೆಗೊಳ್ಳುವಲ್ಲಿ ಪರಿಣಮಿಸಬಹುದು.

ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿ ಆಸ್ತಿಗಳ ಮೌಲ್ಯಮಾಪನ

ಕಂಪನಿಯು ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿ ಆಸ್ತಿಗಳು ಹೊಂದಿರುವ ಮೌಲ್ಯವನ್ನು ಪ್ರತಿಯೊಂದು ವರದಿಯು ಸಂಬಂಧಿಸಿರುವ ಅವಧಿಯ ಅಂತ್ಯದಲ್ಲಿ ಸಮೀಕ್ಷಿಸುತ್ತದೆ.

ಅನುವುಗಳು ಮತ್ತು ಆಕಸ್ಮಿಕ ಜವಾಬ್ದಾರಿಗಳು

ಅನುವುಗಳನ್ನು, ಈ ಹಿಂದಿನ ಘಟನೆಗಳ ಕಾರಣ ಪ್ರಸಕ್ತ ಕಾನೂನಾತ್ಮಕ ಅಥವಾ ರಚನಾತ್ಮಕ ಬದ್ಧತೆಯನ್ನು ಹೊಂದಿದ್ದಲ್ಲಿ ಹಾಗೂ ಬದ್ಧತೆಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಸಂಪನ್ಮೂಲಗಳ ಹೊರಹರಿಯುವಿಕೆಯ ಅಗತ್ಯತೆಯಿರುತ್ತದೆ ಹಾಗೂ ಅಂತಹ ಮೊತ್ತವನ್ನು ವಿಶ್ವಸನೀಯವಾಗಿ ಅಂದಾಜು ಮಾಡಬಹುದು ಎಂಬ ಸಾಧ್ಯತೆಯಿದ್ದಲ್ಲಿಪರಿಗಣಿಸಲಾಗುವುದು,

ಪ್ರಸಕ್ತ ಇರುವಂತಹ ಹಣಕಾಸು ಮೌಲ್ಯದ ಮಾರುಕಟ್ಟೆ ನಿರ್ಧಾರಣೆಗಳನ್ನು ಪ್ರತಿಬಿಂಬಿಸುವಂತಹ ತೆರಿಗೆ-ಪೂರ್ವ ದರವನ್ನು ಉಪಯೋಗಿಸಿಕೊಂಡು (ರಿಯಾಯಿತಿ ನೀಡಿಕೆಯು ಗಮನಾರ್ಹ ಪ್ರಭಾವವನ್ನು ಹೊಂದಿದ್ದಲ್ಲಿ) ಬದ್ಧತೆಯನ್ನು ಇತ್ಯರ್ಥಪಡಿಸುವ ಸಲುವಾಗಿ ನಿರೀಕ್ಷಿಸಲಾಗುವ ಅಗತ್ಯತೆಯ ಪ್ರಸ್ತುತ ಇರುವಂತಹ ಮೌಲ್ಯದಲ್ಲಿ ಅನುವುಗಳನ್ನು ಲೆಕ್ಕಹಾಕಲಾಗುವುದು. ಕಾಲವು

ಕಳೆದಂತೆ ರಿಯಾಯಿತಿಯನ್ನು ಮುಕ್ತಾಯಗೊಳಿಸಿದ ಕಾರಣ ಅನುವುಗಳಲ್ಲಿನ ಹೆಚ್ಚಳವನ್ನು ಪ್ರಸ್ತುತ ಇರುವಂತಹ ಹಣಕಾಸು ಮೌಲ್ಯ/ವೆಚ್ಚದಲ್ಲಿ ಪರಿಗಣಿಸಲಾಗುವುದು. ಅನುವುಗಳನ್ನು ಪ್ರತೀ ವರದಿಗೆ ಸಂಬಂಧಿಸಿರುವ ಸಾಲಿನ ಅಂತ್ಯದಲ್ಲಿ ಸಮೀಕ್ಷಿಸಲಾಗುವುದು ಹಾಗೂ ಪ್ರಸಕ್ತ ಅತ್ಯುತ್ತಮ ಅಂದಾಜನ್ನು ಪ್ರತಿಬಿಂಬಿಸುವ ಸಲುವಾಗಿ ಹೊಂದಾಣಿಕೆ ಮಾಡಲಾಗುವುದು. ಬದ್ಧತೆಯನ್ನು ಇತ್ಯರ್ಥಪಡಿಸುವ ಸಲುವಾಗಿ ಆರ್ಥಿಕ ಸಂಪನ್ಮೂಲದ ಹೊರಹರಿವು ಇನ್ನು ಮುಂದೆ ಅಗತ್ಯವಿರುವುದಿಲ್ಲ ಎಂಬುದಾಗಿ ಕಂಡುಬಂದಲ್ಲಿ ಅನುವಿಗೆ ಸಂಬಂಧಿತ ನಮೂದನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಹಿಂದುಮುಂದು (ರಿವರ್ಸ್) ಮಾಡಲಾಗುವುದು/ಹಿಮ್ಮೊಗವಾಗಿಸಲಾಗುವುದು.

ಹಿಂದಿನ ಘಟನೆಗಳಿಂದ ಉದ್ಭವಿಸಬಹುದಾದ ಸಂಭಾವ್ಯ ಬದ್ಧತೆಯು ಇರುವಲ್ಲಿ ಹಿಂದಿನ ಘಟನೆಗಳಿಂದ ಉದ್ಭವಿಸಬಹುದಾದ ಸಂಭಾವ್ಯ ಬದ್ಧತೆಯು ಇರುವಲ್ಲಿಅಥವಾ ಹಿಂದಿನ ಘಟನೆಗಳಿಂದ ಪ್ರಸಕ್ತ ಉದ್ಭವಿಸುವ ಬದ್ಧತೆಯನ್ನು ಇತ್ಯರ್ಥಗೊಳಿಸುವ ಸಲುವಾಗಿ ಸಂಪನ್ಮೂಲಗಳ ಒಂದು ಹೊರಹರಿವಿನ ಸಂಭಾವ್ಯತೆಯುರದ ಅಥವಾ ಮೊತ್ತದ ವಿಶ್ವಸನೀಯ ಅಂದಾಜನ್ನು ಮಾಡಲಾಗದಿದ್ದಲ್ಲಿ ಆಕಸ್ಮಿಕ ಜವಾಬ್ದಾರಿಯ ಬಹಿರಂಗಪಡಿಸುವಿಕೆಯನ್ನು ಮಾಡಲಾಗುವುದು. ಒಂದು ಆಕಸ್ಮಿಕ ಆಸ್ತಿಯನ್ನು ಹಣಕಾಸು ತ:ಖ್ತೆಗಳಲ್ಲಿ ಪರಿಗಣಿಸುವುದೂ ಇಲ್ಲ ಅಥವಾ ಬಹಿರಂಗಪಡಿಸುವುದೂ ಇಲ್ಲ.

2. <u>ಆದಾಯ/ವರಮಾನ:</u>

i) ಕಾರ್ಯತ: ಸಾಧ್ಯತೆಯುರುವಷ್ಟರ ಮಟ್ಟಿಗೆ ಹಾಗೂ ವ್ಯವಹಾರಾರ್ಯತೆ ಇರುವಷ್ಟರ ಮಟ್ಟಿಗೆ ವರಮಾನವನ್ನು ದಾಖಲಿಸುವ ಸಲುವಾಗಿ ಲೆಕ್ಕವನ್ನಿಡುವಿಕೆಯ ಸಂಚಿತ ಪದ್ಧತಿಯನ್ನು ಅನುಸರಿಸಲಾಗುವುದು. ಸಂಚಿತಗೊಳ್ಳುವಿಕೆಗೆ ಉತ್ತರದಾಯಿಯಾಗಿರುವ ಎಲ್ಲಾ ಆದಾಯ/ವರಮಾನವನ್ನು ಸ್ವೀಕರಿಸುವ ಹಕ್ಕನ್ನು ಸಾಬೀತುಪಡಿಸಿದಂತೆಲ್ಲಾ ಹಾಗೂ ಅಂತಹ ಮೊತ್ತವನ್ನು ನಿರ್ಧಾರಣೆ ಮಾಡಬಹುದಾದಲ್ಲಿ ಹಾಗೂ ಅವುಗಳ ಸ್ವೀಕೃತಿಯಲ್ಲಿ ಗಮನಾರ್ಹವಾದಂತಹ ಅನಿಶ್ಚಿತತೆ ಇಲ್ಲವಾದಲ್ಲಿ, ಅಂತಹ ಎಲ್ಲಾ ಮೊತ್ತಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಬಂಡವಾಳ ಸ್ವರೂಪದ ಸ್ವೀಕೃತಿಗಳನ್ನು ವರ್ಗೀಕರಿಸತಕ್ಕದ್ದು ಹಾಗೂ ಸಾಮಾನ್ಯ/ನಿಯತ ಆದಾಯ/ವರಮಾನಗಳಿಂದ ಪ್ರತ್ಯೇಕವಾಗಿ ತಿಳಿಸತಕ್ಕದ್ದು.

ii) <u>ಅನುದಾನಗಳು:</u>

ಎ) ಸರ್ಕಾರಿ ಅನುದಾನಗಳನ್ನು ಕಂಪನಿಯು ಅಂತಹ ಅನುದಾನಗಳಿಗೆ ಹೊಂದಿಕೊಂಡಂತಿರುವ ಷರತ್ತುಗಳನ್ನು ಪೂರೈಸುವುದು ಹಾಗೂ ಅಂತಹ ಅನುದಾನಗಳನ್ನು ಸ್ವೀಕರಿಸಲಾಗುವುದು ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯು ಇರದ ಹೊರತು ಪರಿಗಣಿಸುವುದಿಲ್ಲ.

ಬಿ) ಒಂದು ವರಮಾನ ಅನುದಾನ ಅಥವಾ ಎಲ್ಲಾ ವರಮಾನ ವೆಚ್ಚಗಳನ್ನು ಭರಿಸುವ ಸಲುವಾಗಿ ಸ್ವೀಕರಿಸಲಾಗುವ ಅನುದಾನವನ್ನು, ಯಾವ ಉದ್ದೇಶದ ವೆಚ್ಚಗಳಿಗಾಗಿ ಅನುದಾನವನ್ನು ನೀಡಲಾಗಿದೆಯೋ ಹಾಗೂ ಅಂತಹ ವೆಚ್ಚಗಳನ್ನು ಯಾವ ಅವಧಿಗಳಲ್ಲಿ ಕಂಪನಿಯು ಪರಿಗಣಿಸುವುದೋ, ಅಂತಹ ಅವಧಿಗಳಲ್ಲಿ ಪರಿಗಣಿಸಲಾಗುವುದು.

ಸಿ) ಚಾಲ್ತಿಯೇತರ ಆಸ್ತಿಗಳ ಖರೀದಿಗಳು, ನಿರ್ಮಾಣ ಅಥವಾ ಸ್ವಾಧೀನಪಡಿಸಿಕೊಳ್ಳುವಿಕೆಗಾಗಿ ಬಂಡವಾಳ ಅನುದಾನವನ್ನು ಒಂದು ಜವಾಬ್ದಾರಿಯನ್ನಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ವರ್ಷದ ಕೊನೆಯಲ್ಲಿ, ಮಂಜೂರಾತಿ ಆದೇಶವನ್ನು ಸ್ವೀಕರಿಸಿದಲ್ಲಿ, ಹಾಗೂ ಮೊತ್ತವನ್ನು ಖಚಿತಪಡಿಸಿಕೊಂಡಲ್ಲಿ, ಮಂಜೂರಾತಿಗೊಂಡಿರುವ ಮೊತ್ತವನ್ನು ಒಂದು ಜವಾಬ್ದಾರಿಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು ಹಾಗೂ ಅಲ್ಲದೆಯೇ ''ಸರ್ಕಾರದಿಂದ ಸ್ವೀಕರಿಸಬೇಕಿರುವ ಅನುದಾನ'' ಎಂಬುದಾಗಿಯೂ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಚಾಲ್ತಿಯೇತರ ಆಸ್ತಿಗಳ ಖರೀದಿಗಳು, ನಿರ್ಮಾಣ ಅಥವಾ ಸ್ವಾಧೀನಪಡಿಸಿಕೊಳ್ಳುವಿಕೆಗಾಗಿ ಬಳಸಿಕೊಂಡಿದ್ದಷ್ಟರ ಮಟ್ಟಿಗೆ ಸಮನಾದ ಮೊತ್ತವನ್ನು ಅನುದಾನ ಲೆಕ್ಕಶೀರ್ಷಿಕೆಯಿಂದ ಬಂಡವಾಳ ಮೀಸಲಿರಿಸಿರುವಿಕೆಗಳಿಗೆ ವರ್ಗಾಯಿಸಲಾಗುವುದು.

3. <u>ವೆಚ್ಚಗಳು</u>

ಎ) ಎಲ್ಲಾ ವೆಚ್ಚಗಳಿಗೆ ಸಂಬಂಧಿಸಿದಂತೆ ಲೆಕ್ಕವನ್ನಿಡುವಿಕೆಯ ಸಂಚಿತ ಪದ್ಧತಿಯನ್ನು ಕಾರ್ಯತ: ಸಾಧ್ಯತೆಯಿರುವಷ್ಟರ ಮಟ್ಟಿಗೆ ಹಾಗೂ ವ್ಯವಹಾರಾರ್ಯತೆ ಇರುವಷ್ಟರ ಮಟ್ಟಿಗೆ ಅನುಸರಿಸಲಾಗುವುದು. ಅಂತಹ ವೆಚ್ಚಗಳು ಪ್ರಯೋಜನಗಳನ್ನು ಸ್ವೀಕರಿಸಿದಂದು ಹಾಗೂ ಒಂದು ನ್ಯಾಯಸಮ್ಮತ ಖಚಿತತೆಯಿಂದ ಮೊತ್ತವನ್ನು ನಿರ್ಧಾರಣೆ ಮಾಡಬಹುದಾದ ಸಂದರ್ಭದಲ್ಲಿ ಸಂಚಿತಗೊಳ್ಳುವುದು.

ಬಿ) ಬಂಡವಾಳ ಸ್ವರೂಪದ ವೆಚ್ಚಗಳನ್ನು ವರ್ಗೀಕರಿಸತಕ್ಕದ್ದು ಹಾಗೂ ಪ್ರತ್ಯೇಕವಾಗಿ ತಿಳಿಸತಕ್ಕದ್ದು.

4. <u>ಉದ್ಯೋಗಿಗಳಿಗೆ ಸಂಬಂಧಿತ ವ್ಯವಹಾರಗಳು:</u>

ಎ) ಸಂಬಳ, ಕೂಲಿಗಳು ಮತ್ತು ಭತ್ಯೆಗಳ ಮೇಲಿನ ವೆಚ್ಚಗಳನ್ನು ಪ್ರತೀ ತಿಂಗಳಿನ ಅಂತ್ಯದಲ್ಲಿ ಸಂಚಿತ ಆಧಾರದ ಮೇರೆಗೆ ಲೆಕ್ಕವನ್ನಿಡತಕ್ಕದ್ದು.

ಬಿ) ಆದಾಯ ತೆರಿಗೆ, ವೃತ್ತಿಗಳ ಮೇಲಿನ ತೆರಿಗೆ, ಇತ್ಯಾದಿ ಮೂಲದಲ್ಲಿಯೇ ಕಡಿದುಕೊಳ್ಳುವಿಕೆಗಳನ್ನು ಅವುಗಳಿಗೆ ಅನುಗುಣವಾದ ಸಂಬಳ ಅಥವಾ ಕೂಲಿವೆಚ್ಚಗಳನ್ನು ಪಾವತಿಸಿದ ಅವಧಿಯಲ್ಲಿಯೇ ಜವಾಬ್ದಾರಿಯನ್ನಾಗಿ ಪರಿಗಣಿಸತಕ್ಕದ್ದು.

ಸಿ) ರಜೆ ನಗದೀಕರಣ ಮುಂತಾದ ಸೇವೆಯ ಅಂತ್ಯದಲ್ಲಿ ನೀಡಲಾಗುವ ಪ್ರಯೋಜನಗಳನ್ನು ಉದ್ಯೋಗಿಗಳಿಗೆ ಪಾವತಿಗಾಗಿ ಬಾಕಿಯಾದಂತೆಲ್ಲಾ ಅಂದರೆ ಕಂಪನಿಯಿಂದ ಅವರುಗಳ ನಿವೃತ್ತಿಯ ವೇಳೆಯಲ್ಲಿಯೇ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು. ಕಾರ್ಯತ: ಸಾಧ್ಯತೆಯ ಇತಿಮಿತಿಗಳ ಕಾರಣ ಜವಾಬ್ದಾರಿಗಳ 'ವಿಮಾಗಣಿತ ಮೌಲ್ಯಮಾಪನ'ವನ್ನು ಪರಿಗಣಿಸಿರುವುದಿಲ್ಲ.

ಡಿ) ಸೇವಾ ಅವಧಿಯಲ್ಲಿ ಉದ್ಯೋಗಿಗಳಿಂದ ಪಾವತಿಗಾಗಿ ಕೋರಲಾಗುವ ಹಾಗೂ ಆ ರೀತಿ ನೀಡಲಾಗುವ ರಜೆ ನಗದೀಕರಣ ಮೊತ್ತವನ್ನು ಪಾವತಿಸಿದ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಇ) ನಿವೃತ್ತಿ ಸಮಯದಲ್ಲಿನ ಪ್ರಯೋಜನಗಳನ್ನು ಭರಿಸುವ ಸಲುವಾಗಿ ಸರ್ಕಾರಕ್ಕೆ ಕಾಣಿಕೆಯನ್ನು ನೀಡಿದಲ್ಲಿ (ರಾಜ್ಯ ಸರ್ಕಾರದಿಂದ ನಿಯೋಜನೆಯ ಮೇಲೆ ಬಂದಿರುವ ಉದ್ಯೋಗಿಗಳ ರೀತಿಯಲ್ಲಿ), ಪಿಂಚಣಿ ಮತ್ತು ರಜೆ ಸಂಬಳ ಕಾಣಿಕೆಯ ಕಡೆಗೆ ಪಾವತಿಸಬೇಕಾದ ಮೊತ್ತವನ್ನು, ಅದು ಪಾವತಿಸಲು ಬಾಕಿಯಾದ ಸಂದರ್ಭದಲ್ಲಿ ಪರಿಗಣಿಸತಕ್ಕದ್ದು.

5. <u>ಇತರೆ ವರಮಾನ ವೆಚ್ಚಗಳು:</u>

ಎ. ಒಂದು ಕಾಮಗಾರಿ ಆದೇಶ ಅಥವಾ ಖರೀದಿ ಆದೇಶ ಅಥವಾ ಸರಬರಾಜಿಗಾಗಿ ಲಿಖಿತ ಕೋರಿಕೆಯ ಬೆಂಬಲದಿಂದ ಕೂಡಿರುವ ಸರಕುಗಳು ಮತ್ತು ಸೇವೆಗಳ ಸಂಗ್ರಹಣೆಯ ಮೇಲಿನ ಎಲ್ಲಾ ವೆಚ್ಚಗಳು ಬಿಲ್ಲುಗಳನ್ನು ಅನುಮೋದಿಸಿದ ಸಂದರ್ಭದಲ್ಲಿ ಸಂಚಿತಗೊಳ್ಳುತ್ತವೆ.

6. <u>ಮೀಸಲಿರಿಸಿರುವ ಹಣಕಾಸು:</u>

ಎ. ಮೀಸಲಿರಿಸಿರುವ ಹಣಕಾಸನ್ನು ಒಂದು ಜವಾಬ್ದಾರಿಯನ್ನಾಗಿ ಪರಿಗಣಿಸತಕ್ಕದ್ದು.
ಬಿ. ಮೀಸಲಿರಿಸಿರುವ ಹಣಕಾಸಿನಿಂದ ಮಾಡಲಾದ ಹೂಡಿಕೆಯ ಮೇಲೆ ದೊರೆಯುವ

ವರಮಾನವನ್ನು, ಆ ರೀತಿ ಗಳಿಸಲಾಗುವ ಲಾಭ ಅಥವ ಭರಿಸಲಾಗುವ ನಷ್ಟವನ್ನು ಮೀಸಲಿರಿಸಿರುವ ಹಣಕಾಸಿಗೆ ಜಮೆ ಮಾಡತಕ್ಕದು.

ಸಿ. ಹಣಕಾಸನ್ನು ನಿರ್ದಿಷ್ಟವಾಗಿ ಮೀಸಲಿರಿಸಿರುವ ಕಾರ್ಯಕ್ರಮಗಳು/ಯೋಜನೆಗಳ ಮೇಲೆ ಭರಿಸಲಾಗುವ ಯಾವುದೇ ವೆಚ್ಚಗಳನ್ನು ಆ ಹಣಕಾಸಿಗೆ ಹಾಕತಕ್ಕದು.

ಡಿ. ಮೀಸಲಿರಿಸಿರುವ ಹಣಕಾಸಿನಿಂದ ಬಂಡವಾಳ ವೆಚ್ಚವನ್ನು ಭರಿಸಿದಲ್ಲಿ, ಅದಕ್ಕೆ ಸಮನಾದ ಮೊತ್ತವನ್ನು ಮೀಸಲಿರಿಸಿರುವ ಹಣಕಾಸು ಲೆಕ್ಕದಿಂದ ಮೀಸಲಿರಿಸಿರುವ ಹಣಕಾಸು (ಬಳಸಿಕೊಳ್ಳಲಾಗಿರುವ) ಲೆಕ್ಕಕ್ಕೆ ವರ್ಗಾಯಿಸತಕ್ಕದ್ದು.

೭. <u>ಸ್ಥಿರಾಸ್ತಿಗಳು:</u>

ಎ. ಸ್ಥಿರಾಸ್ತಿಗಳನ್ನು ಸಾಂಪ್ರದಾಯಿಕ ಮೂಲ ಬೆಲೆಯಲ್ಲಿ ದಾಖಲಿಸತಕ್ಕದ್ದು. ಒಂದು ಸ್ಥಿರಾಸ್ತಿಯ ಮೌಲ್ಯವು ಆಸ್ತಿಯನ್ನು ಉದ್ದೇಶಿತ ಸ್ಥಳದಲ್ಲಿ ಇಡಲು ಹಾಗೂ ಅದು ಕಾರ್ಯನಿರ್ವಹಿಸುವ ಸ್ಥಿತಿಗೆ ಅದನ್ನು ತರಲು ಅಗತ್ಯವಿರುವಂತಹ ಎಲ್ಲಾ ಸಂಬಂಧಿತ ವೆಚ್ಚಗಳನ್ನು ಅವೆಂದರೆ ಕೂಲಿ/ಸಾಗಾಣಿಕೆ, ವಿಮೆ, ಸ್ಥಳದ ತಯಾರಿ, ಇತ್ಯಾದಿ ವೆಚ್ಚಗಳನ್ನು ಒಳಗೊಂಡಿರುತ್ತದೆ. ಸಾಲದ ಮೊತ್ತದಿಂದ ಖರೀದಿಸಲಾಗುವ ಒಂದು ಸ್ಥಿರಾಸ್ತಿಗೆ ಸಂಬಂಧಿಸಿದಂತೆ, ಆಸ್ತಿಯನ್ನು ಕಾರ್ಯಾರಂಭಗೊಳಿಸಿದ ದಿನಾಂಕದವರೆಗಿನ ಸಾಲದ ಮೇಲಿನ ಬಡ್ಡಿಯನ್ನು ಅಂತಹ ಸ್ಥಿರಾಸ್ತಿಯ ಮೌಲ್ಯಕ್ಕೆ ಸೇರಿಸತಕ್ಕದ್ದು.

ಬಿ. ರಿಯಾಯಿತಿ ದರದಲ್ಲಿ ಖರೀದಿಸಲಾದ ಒಂದು ಆಸ್ತಿಯನ್ನು, ಕಂಪನಿಗೆ ಮಾರಾಟ ಮಾಡಲಾದ ಅಂತಹ ಆಸ್ತಿಯ ವಾಸ್ತವಿಕ ಮೌಲ್ಯದಲ್ಲಿ (ಅಂದರೆ ರಿಯಾಯಿತಿ ಮೌಲ್ಯದಲ್ಲಿ) ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

ಸಿ. ಯಾವುದೇ ವೆಚ್ಚವನ್ನು ಭರಿಸದೆಯೇ ಉಚಿತವಾಗಿ ಪಡೆಯಲಾದ ಒಂದು ಆಸ್ತಿಯನ್ನು ಒಂದು ರೂಪಾಯಿಯ ನಾಮಮಾತ್ರದ ಮೌಲ್ಯದಲ್ಲಿ ದಾಖಲೆಗಳಲ್ಲಿ ದಾಖಲಿಸತಕ್ಕದ್ದು.

ಡಿ. ನಿರ್ಮಾಣ/ಸ್ಥಿರಗೊಳಿಸುವಿಕೆ/ಸ್ಥಾಪನೆಯ ಹಂತದಲ್ಲಿರುವ ಆಸ್ತಿಗಳನ್ನು ಅಂತಹ ಯೋಜನೆಯು ಪೂರ್ಣಗೊಳ್ಳುವವರೆಗೂ 'ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು' ಅಡಿಯಲ್ಲಿ ತೋರಿಸತಕ್ಕದ್ದು ಹಾಗೂ ಪೂರ್ಣಗೊಂಡನಂತರ ಮತ್ತು ಉದ್ದೇಶಿತ ಬಳಕೆಗೆ ಆಸ್ತಿಯು ಸಿದ್ಧಗೊಂಡನಂತರ ಸ್ಥಿರಾಸ್ತಿಗಳಿಗೆ ವರ್ಗಾಯಿಸತಕ್ಕದ್ದು. ವೆಚ್ಚಗಳಿಗೆ ನಿಗದಿಗೊಳಿಸಲಾಗಿರುವ ನಿಗದಿತ ದಿನಾಂಕದವರೆಗೆ ಭರಿಸಲಾಗಿರುವಂತಹ ಎಲ್ಲಾ ವೆಚ್ಚಗಳನ್ನು ಆಸ್ತಿಯ ಮೌಲ್ಯಮಾಪನದಲ್ಲಿ ಸೇರಿಸತಕ್ಕದ್ದು.

ಇ. ಅದರ ಬಳಕೆಯ ಸಾಮರ್ಥ್ಯ ಅಥವಾ ಬಳಸಬಹುದಾದ ಅವಧಿಯನ್ನು ಹೆಚ್ಚಳಗೊಳಿಸುವ ಸಂದರ್ಭದಲ್ಲಿ ಒಂದು ಸ್ಥಿರಾಸ್ತಿಗೆ ಮಾಡಲಾಗಿರುವ ಹೆಚ್ಚುವರಿ ಸೇರ್ಪಡೆ ಅಥವಾ ಅಭಿವೃದ್ಧಿಯ ವೆಚ್ಚವನ್ನು ಬಂಡವಾಳೀಕರಿಸತಕ್ಕದ್ದು.

ಎಫ್. ಆಸ್ತಿಗಳ ಆರ್ಥಿಕವಾಗಿ ಬಳಸಬಹುದಾದ ಅವಧಿಗಳನ್ನು ಆಸ್ತಿಗಳ ಸ್ವರೂಪ, ಆಸ್ತಿಗಳ ಅಂದಾಜು ಮಾಡಲ್ಪಟ್ಟಿರುವ ಬಳಕೆ, ಕಾರ್ಯಾಚರಣೆಗೊಳ್ಳುತ್ತಿರುವ ಪರಿಸ್ಥಿತಿಗಳು, ನಿರೀಕ್ಷಿತ ತಾಂತ್ರಿಕ ಬದಲಾವಣೆಗಳು, ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡಂತೆ ಒಂದು ತಾಂತ್ರಿಕ ಮೌಲ್ಯಮಾಪನದ ಆಧಾರದ ಮೇರೆಗೆ ನಿರ್ಧಾರಣೆ ಮಾಡಲಾಗುವುದು. ಅಂದಾಜು ಮಾಡಲ್ಪಟ್ಟ ಬಳಸಬಹುದಾದ ಅವಧಿಯನ್ನು ಪ್ರತೀ ವರದಿಯ ಅವಧಿಯ ಅಂತ್ಯದಲ್ಲಿ ಸಮೀಕ್ಷಿಸಲಾಗುವುದು ಹಾಗೂ ಅಂದಾಜಿನಲ್ಲಿ ಯಾವುದಾದರೂ ಬದಲಾವಣೆಗಳು ಇದ್ದಲ್ಲಿ ಭವಿಷ್ಯದ ದಿನಾಂಕದಿಂದ ಅನ್ವಯಿಗೊಳ್ಳುವಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಜಿ. ಭೂಮಿ/ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳನ್ನು ವಿಲೆವಾರಿ ಮಾಡಿದಂದು ಅಥವಾ ಆಸ್ತಿಯನ್ನು ಉಪಯೋಗಿಸುವುದರಿಂದ ಭವಿಷ್ಯದಲ್ಲಿ/ಮುಂದಿನ ದಿನಗಳಲ್ಲಿ ಯಾವುದೇ ಆರ್ಥಿಕ ಪ್ರಯೋಜನಗಳು ದೊರೆಯುವುದಿಲ್ಲ ಎಂಬುದನ್ನು ನಿರೀಕ್ಷಿಸಿದಂದು ಅಂತಹ ಆಸ್ತಿಯ ಪರಿಗಣನೆಯನ್ನು ಹಿಂಪಡೆಯಲಾಗುವುದು. ಒಂದು ಭೂಮಿ/ಕಟ್ಟಡ ಮುಂತಾದ ಆಸ್ತಿಗಳು,

ಸ್ಥಾವರ/ಯಂತ್ರ ಮತ್ತು ಉಪಕರಣಗಳ ಒಂದು ಬಾಬಿನ ವಿಲೇವಾರಿಯಿಂದ ಅಥವಾ ಅದರ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಿದ್ದರಿಂದ ಉದ್ಭವಿಸುವ ಲಾಭ ಅಥವಾ ನಷ್ಟವನ್ನು, ಮಾರಾಟಗಳಿಂದ ದೊರೆತ ಪ್ರತಿಫಲ ಹಾಗೂ ಅಂತಹ ಆಸ್ತಿಯು ಹೊಂದಿರುವ ವಾಸ್ತವಿಕ ಮೌಲ್ಯ, ಇವೆರಡರ ವ್ಯತ್ಯಾಸ ಎಂಬುದಾಗಿ ನಿರ್ಧಾರಣೆ ಮಾಡಲಾದ ಮೊತ್ತವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸಲಾಗುವುದು.

ಎಚ್. ಒಂದು ನಿರ್ದಿಷ್ಟ ಬಳಸಬಹುದಾದ ಅವಧಿಯೊಂದಿಗಿನ ಅಗೋಚರ ಆಸ್ತಿಗಳನ್ನು ಪ್ರತ್ಯೇಕವಾಗಿ ಖರೀದಿಸಲಾಗುವುದು ಹಾಗೂ ಸವೆತ/ದುರ್ಬಲಗೊಳ್ಳುವಿಕೆಯ ಕಾರಣದಿಂದ ಕ್ರಮೇಣ ತಗ್ಗಿಸಲಾಗುವ ಮೌಲ್ಯಗಳನ್ನು ತೆಗೆದನಂತರ ಅವುಗಳ ನಿವ್ವಳ ಮೂಲ ಬೆಲೆಯಲ್ಲಿ ತೋರಿಸಲಾಗುವುದು. ಸವೆತ/ದುರ್ಬಲಗೊಳ್ಳುವಿಕೆಯ ಕಾರಣದಿಂದ ಕ್ರಮೇಣ ತಗ್ಗಿಸಲಾಗುವ (ಅಮಾರ್ಟಿಸಿಸೇಷನ್) ಮೌಲ್ಯಗಳನ್ನು ಅವುಗಳ ಬಳಸಬಹುದಾದ ಅವಧಿಯನ್ನು ವ್ಯಾಪಿಸಿದಂತೆ ನೇರ ಗೆರೆ ಪದ್ಧತಿಯಲ್ಲಿ (ಸ್ಟ್ರೈಟ್ ಲೈನ್ ಮೆಥಡ್), ಅವು ಆಸ್ತಿಗಳ ಆರ್ಥಿಕ ಪ್ರಯೋಜನಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಯಿತು ಎಂಬುದನ್ನು ತೋರಿಸುತ್ತವೆ. ಅಂದಾಜು ಮಾಡಲ್ಪಟ್ಟ ಬಳಸಬಹುದಾದ ಅವಧಿ, ಕ್ರಮೇಣ ಮೌಲ್ಯವನ್ನು ತಗ್ಗಿಸಬೇಕಾದ ಮಾದರಿ ಹಾಗೂ ಕ್ರಮೇಣ ಮೌಲ್ಯವನ್ನು ತಗ್ಗಿಸಬೇಕಾದ ಅವಧಿಯನ್ನು ಪ್ರತೀ ವರದಿಯ ಅವಧಿಯ ಅಂತ್ಯದಲ್ಲಿ ಸಮೀಕ್ಷಿಸಲಾಗುವುದು ಹಾಗೂ ಅಂದಾಜಿನಲ್ಲಿ ಯಾವುದಾದರೂ ಬದಲಾವಣೆಗಳು ಇದ್ದಲ್ಲಿ ಭವಿಷ್ಯದ ದಿನಾಂಕದಿಂದ ಅನ್ವಯಿಗೊಳ್ಳುವಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

<u>ಸ್ಥಿರಾಸ್ತಿಗಳ ಮೇಲೆ ಸವಕಳಿ</u>

ಎ. ಸವಕಳಿಗೆ ಒಳಪಡದ ಭೂಮಿಯನ್ನು ಹೊರತುಪಡಿಸಿದಂತೆ ಎಲ್ಲಾ ಸ್ಥಿರಾಸ್ತಿಗಳ ಮೇಲೆ ಸವಕಳಿಯನ್ನು ನೇರ ಗೆರೆ ಪದ್ಧತಿಯಲ್ಲಿ (ಸ್ಟ್ರೈಟ್ ಲೈನ್ ಮೆಥಡ್) ವೆಚ್ಚಕ್ಕೆ ಹಾಕಲಾಗುವುದು.

ಬಿ. ಪ್ರತಿಯೊಂದು ಮಾದರಿಯ ಸ್ಥಿರಾಸ್ತಿಗಳಿಗೆ ಸವಕಳಿಯ ದರವು ಆಸ್ತಿಯನ್ನು ಬಳಸಬಹುದೆಂಬುದಾಗಿ ನಿರೀಕ್ಷಿಸಲಾಗಿರುವ ಅಂದಾಜು ಅವಧಿಯ ಆಧಾರದ ಮೇರೆಗೆ ಸರ್ಕಾರದಿಂದ ಅನುಮೋದನೆಗೊಂಡಿರುವ ದರಗಳಲ್ಲಿ ಆಗಿರುತ್ತದೆ.

ಸಿ. ಪ್ರಸಕ್ತ ಸಾಲಿನಲ್ಲಿ ಸೇರಿಸಲಾದ/ಖರೀದಿಸಲಾದ ಆಸ್ತಿಗಳಿಗೆ:

ಪ್ರಸಕ್ತ ಸಾಲಿನಲ್ಲಿ ಖರೀದಿಸಲಾದ/ನಿರ್ಮಾಣ ಮಾಡಲಾದ ಆಸ್ತಿಗಳಿಗೆ, ಸವಕಳಿಯನ್ನು ಆಸ್ತಿಗಳನ್ನು ಬಳಸುವುದಕ್ಕೆ ಪ್ರಾರಂಭಿಸಲಾದ ದಿನಂಕದಿಂದ ಅನ್ವಯಿಗೊಳ್ಳುವ ದರಗಳಲ್ಲಿ ಅನುವು ಮಾಡಲಾಗುವುದು.

ಡಿ. ಪ್ರಸಕ್ತ ಸಾಲಿನಲ್ಲಿ ವಿಲೇವಾರಿ ಮಾಡಲಾದ ಆಸ್ತಿಗಳಿಗೆ:

1. ಪ್ರಸಕ್ತ ಸಾಲಿನಲ್ಲಿ ವಿಲೇವಾರಿ ಮಾಡಲಾದ/ವರ್ಗಾಯಿಸಲಾದ ಆಸ್ತಿಗಳಿಗೆ, ಸವಕಳಿಯನ್ನು ಅಂತಹ ವಿಲೇವಾರಿ ಮಾಡಲಾದ/ವರ್ಗಾಯಿಸಲಾದ ದಿನಾಂಕದವರೆಗೆ ಅನುವು ಮಾಡತಕ್ಕದ್ದು.
2. ಸಂಪೂರ್ಣ ಗುತ್ತಿಗೆ ಅವಧಿಯ ಗುತ್ತಿಗೆ ಬಾಡಿಗೆಯನ್ನು ಒಂದು ಒಟ್ಟಾರೆ ಮೌಲ್ಯವಾಗಿ ಪಾವತಿಸಿರುವ ಆಸ್ತಿಗಳನ್ನು ಆಸ್ತಿಗಳ ಒಂದು ಭಾಗವಾಗಿ ತೆಗೆದುಕೊಳ್ಳಲಾಗುವುದು ಹಾಗೂ ಗುತ್ತಿಗೆ ಅವಧಿಯ ಉದ್ದಕ್ಕೂ ಸಮಾನವಾಗಿ ಅದರ ಮೌಲ್ಯವನ್ನು ತಗ್ಗಿಸಲಾಗುವುದು (ಅಮಾರ್ಟಿಸಿಷನ್).

8. <u>ಹೂಡಿಕೆಗಳು</u>

ಎ. ದೀರ್ಘಾವಧಿ ಹೂಡಿಕೆಗಳೆಂದರೆ ಕಂಪನಿಯು ಒಂದು ವರ್ಷಕ್ಕೂ ಮೀರಿದ ಅವಧಿಗೆ ಹೊಂದಿರುವ ಹೂಡಿಕೆಗಳು. ದೀರ್ಘಾವಧಿ ಹೂಡಿಕೆಗಳನ್ನು ಅವುಗಳಿಗೆ ಸಂಬಂಧಿತ ವೆಚ್ಚಗಳು ಅವೆಂದರೆ ಶುಲ್ಕಗಲು, ದಲ್ಲಾಳಿ, ಸುಂಕಗಳು, ಇತ್ಯಾದಿ ವೆಚ್ಚಗಳನ್ನು ಸೇರಿದಂತೆ ಮೂಲ ಬೆಲೆಯಲ್ಲಿ ಮೌಲ್ಯಮಾಪನ ಮಾಡತಕ್ಕದ್ದು. ಹೂಡಿಕೆಯಲ್ಲಿನ ಇಳಿಕೆಯನ್ನು ಹೂಡಿಕೆಗಳ ಮೌಲ್ಯದಿಂದ

ಕಳೆಯತಕ್ಕದ್ದು.

ಬಿ. ಅಲ್ಪಾವಧಿ ಹೂಡಿಕೆಗಳೆಂದರೆ ತತ್‌ಕ್ಷಣದಲ್ಲಿಯೇ ನಗದೀಕರಣಗೊಳಿಸಿಕೊಳ್ಳಬಹುದಾದ ಹಾಗೂ ಒಂದು ವರ್ಷವನ್ನು ಮೀರಿದ ಅವಧಿಗೆ ಮಾಡಿರದ ಹೂಡಿಕೆಗಳು. ಅವುಗಳಿಗೆ ಸಂಬಂಧಿತ ವೆಚ್ಚಗಳು ಅವೆಂದರೆ ಶುಲ್ಕಗಳು, ದಲ್ಲಾಳಿ, ಸುಂಕಗಳು, ಇತ್ಯಾದಿ ವೆಚ್ಚಗಳನ್ನು ನೇರಿದಂತೆ ಅವುಗಳನ್ನು ಮೂಲ ಬೆಲೆಯಲ್ಲಿ ಅಥವಾ ಮಾರುಕಟ್ಟೆ ಮೌಲ್ಯದಲ್ಲಿ (ಆ ರೀತಿ ತಿಳಿಸಿದ್ದಲ್ಲಿ) ಮೌಲ್ಯಮಾಪನ ಮಾಡತಕ್ಕದ್ದು. ಸಾಮಾನ್ಯವಾಗಿ, ಬ್ಯಾಂಕುಗಳಲ್ಲಿ ಒಂದು ವರ್ಷ ಅಥವಾ ಅದಕ್ಕೂ ಕಡಿಮೆ ಅವಧಿಗೆ ಹೂಡಿಕೆ ಮಾಡಲಾಗಿರುವ ನಿಶ್ಚಿತ ಅವಧಿ ಠೇವಣಿಗಳು ಎಂಬ ಅರ್ಥವನ್ನು ಅವು ನೀಡುತ್ತವೆ.

ಸಿ. ದೀರ್ಘಾವಧಿ ಮತು ಅಲ್ಪಾವಧಿ ಹೂಡಿಕೆಗಳ ಮೇಲಿನ ಬಡ್ಡಿಯನ್ನು ಅವು ಸ್ವೀಕರಿಸಲು ಬಾಕಿಯಾದಂತೆಲ್ಲಾ ಪರಿಗಣಿಸತಕ್ಕದ್ದು ಹಾಗೂ ಅಂತಹ ಅವಧಿಗಳ ಅಂತ್ಯದಲ್ಲಿ ಅವು ಸಂಚಿತಗೊಳ್ಳತಕ್ಕದು.

ಡಿ. ಷೇರು ಲಾಭಾಂಶ ವರಮಾನವನ್ನು ಅದು ಸ್ವೀಕೃತಗೊಂಡ ಸಂದರ್ಭದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

ಇ. ಹೂಡಿಕೆಯನ್ನು ಮಾರಾಟ ಮಾಡುವುದರಿಂದ ಬರುವ ಲಾಭ/ನಷ್ಟವನ್ನು (ಕಮಿಷನ್ನು, ದಲ್ಲಾಳಿ,, ಇತ್ಯಾದಿ ಮಾರಾಟ ವೆಚ್ಚಗಳನ್ನು ಕಳೆದನಂತರ ನಿವ್ವಳ ಮೊತ್ತ) ಅಂತಹ ಮಾರಾಟವನ್ನು ಮಾಡಿದ ಸಾಲಿನಲ್ಲಿ ಪರಿಗಣಿಸತಕ್ಕದ್ದು.

ಎಫ್) ನಿರ್ದಿಷ್ಟ ಉದ್ದೇಶಗಳಿಗಾಗಿ ಮೀಸಲಿರಿಸಿರುವ ಹಣಕಾಸು ಅಥವಾ ಅನುದಾನಗಳಿಂದ ಮಾಡಲಾದ ಹೂಡಿಕೆಗಳ ಮೇಲಿನ ವರಮಾನವನ್ನು ಅವು ಸಂಚಿತಗೊಂಡೆಂತಲ್ಲಾ ಪರಿಗಣಿಸುವುದು ಹಾಗೂ ಅನುಕ್ರಮವಾಗಿ ಮೀಸಲಿರಿಸಿರುವ ಹಣಕಾಸು ಹಾಗೂ ನಿರ್ದಿಷ್ಟ ಅನುದಾನಗಳಿಗೆ ಜಮೆ ಮಾಡತಕ್ಕದ್ದು. ಮೀಸಲಿರಿಸಿರುವ ಹಣಕಾಸು ಹಾಗೂ ನಿರ್ದಿಷ್ಟ ಅನುದಾನಗಳಿಂದ ಮಾಡಲಾಗಿರುವ ಹೂಡಿಕೆಯನ್ನು ಮಾರಾಟ ಮಾಡುವುದರಿಂದ ಬರುವ ಲಾಭ/ನಷ್ಟವನ್ನು (ಕಮಿಷನ್ನು, ದಲ್ಲಾಳಿ,, ಇತ್ಯಾದಿ ಮಾರಾಟ ವೆಚ್ಚಗಳನ್ನು ಕಳೆದನಂತರ ನಿವ್ವಳ ಮೊತ್ತ) ಅಂತಹ ಮಾರಾಟವನ್ನು ಮಾಡಿದ ಸಾಲಿನಲ್ಲಿ ಪರಿಗಣಿಸತಕ್ಕದ್ದು ಹಾಗೂ ಅದನ್ನು ಅನುಕ್ರಮವಾಗಿ ಮೀಸಲಿರಿಸುವ ಹಣಕಾಸು ಹಾಗೂ ನಿರ್ದಿಷ್ಟ ಅನುದಾನಗಳಿಗೆ ಜಮೆ ಮಾಡತಕ್ಕದ್ದು/ಖರ್ಚನ್ನು ಹಾಕತಕ್ಕದ್ದು.

9. <u>ನಗದು ಮತ್ತು ನಗದಿಗೆ ಸಮಾನವಾದವುಗಳು:</u>

ಮೌಲ್ಯದಲ್ಲಿನ ಬದಲಾವಣೆಯ ಒಂದು ಗಮನಾರ್ಹವಲ್ಲದ ಸಂಭಾವ್ಯ ಅಪಾಯದ ಷರತ್ತಿನೊಂದಿಗಿರುವ ಹಾಗೂ ಖರೀದಿಸಿದ ದಿನಾಂಕದಿಂದ ಮೂರು ತಿಂಗಳು ಅಥವಾ ಇನ್ನೂ ಕಡಿಮೆ ಅವಧಿಯಲ್ಲಿ ಮೂಲ ಮೌಲ್ಯವನ್ನು ಹೊಂದಿರುವ ಹಾಗೂ ನಗದಿನ ಅರಿತಿರುವ ಮೊತ್ತಕ್ಕೆ ತತ್‌ಕ್ಷಣವೇ ನಗದೀಕರಿಸಬಹುದಾದಂತಹ ಅಧಿಕ ಪ್ರಮಾಣದಲ್ಲಿ ಹಣಕಾಸನ್ನು ಪಡೆದುಕೊಳ್ಳುವ ಸ್ಥಿತಿಯಲ್ಲಿರುವ ಹಣಕಾಸು ಸಾಧನಗಳನ್ನು ನಗದಿಗೆ ಸಮಾನವಾದವುಗಳು ಎಂಬುದಾಗಿ ಕಂಪನಿಯು ಪರಿಗಣಿಸುತ್ತದೆ.

10. <u>ಜವಾಬ್ದಾರಿಗಳು:</u>

ಎಲ್ಲಾ ಜವಾಬ್ದಾರಿಗಳನ್ನು ಅವುಗಳಿಗೆ ಪಾವತಿಸಲು ನಿರೀಕ್ಷಿತ ಸಂಪೂರ್ಣ ಮೌಲ್ಯದಲ್ಲಿ ದಾಖಲಿಸತಕ್ಕದ್ದು.

11. <u>ನಗದು/ಹಣಕಾಸು ಹರಿವಿನ ತ:ಖ್ತೆ:</u>

ನಗದು/ಹಣಕಾಸು ಹರಿವಿನ ತ:ಖ್ತೆಯ ಬಗ್ಗೆ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ ತರರಲ್ಲಿ ನಿರ್ದಿಷ್ಟಪಡಿಸಿರುವಂತೆ ನಗದು/ಹಣಕಾಸು ಹರಿವಿನ ತ:ಖ್ತೆಯನ್ನು ತಯಾರಿಸಲಾಗುವುದು ಹಾಗೂ ಕಂಪನಿಯ ಕಾರ್ಯಾಚರಣೆಗಳಿಂದ, ಹೂಡಿಕೆಗಳಿಂದ ಮತ್ತು ಹಣಕಾಸು ಚಟುವಟಿಕೆಗಳಿಂದ ನಗದು/ಹಣಕಾಸಿನ ಹರಿವನ್ನು ತಿಳಿಸಲಾಗುವುದು.

12. **ಷೇರು ಒಂದರ ಗಳಿಕೆಗಳು**

ಕಂಪನಿಯು ಷೇರು ಒಂದರ ಗಳಿಕೆಗಳಿಗೆ ಸಂಬಂಧಿತ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ ೨೦ರ ಅನುಸಾರ ಷೇರು ಒಂದರ ಮೂಲ ಹಾಗೂ ದುರ್ಬಲಗೊಳಿಸಲ್ಪಟ್ಟ (ಡೈಲ್ಯೂಟೆಡ್) ಗಳಿಕೆಗಳನ್ನು ತಿಳಿಸುವುದು. ಷೇರು ಒಂದರ ಮೂಲ ಗಳಿಕೆಗಳನ್ನು ಪ್ರಸಕ್ತ ಅವಧಿಯಲ್ಲಿ ಬಾಕಿಯಿರುವಂತಹ ಈಕ್ವಿಟಿ ಷೇರುಗಳ ತೂಗಲ್ಪಟ್ಟ ಸರಾಸರಿ ಸಂಖ್ಯೆಯಿಂದ ಪ್ರಸಕ್ತ ಸಾಲಿನ ನಿವ್ವಳ ಲಾಭ ಅಥವಾ ನಷ್ಟವನ್ನು ವಿಭಜಿಸುವ ಮೂಲಕ ಲೆಕ್ಕಹಾಕಲಾಗುವುದು. ಷೇರು ಒಂದರ ದುರ್ಬಲಗೊಳಿಸಲ್ಪಟ್ಟ (ಡೈಲ್ಯೂಟೆಡ್) ಗಳಿಕೆಗಳನ್ನು ಪ್ರಸಕ್ತ ಅವಧಿಗೆ ನಿವ್ವಳ ಲಾಭ ಅಥವಾ ನಷ್ಟವನ್ನು ದುರ್ಬಲಗೊಳಿಸುವುದಕ್ಕೆ ಪ್ರತಿಯಾಗಿರುವ ಫಲಿತಾಂಶಗಳು ಇರುವುದನ್ನು ಹೊರತುಪಡಿಸಿದಂತೆ ಎಲ್ಲಾ ದುರ್ಬಲಗೊಳಿಸಲ್ಪಟ್ಟ ಸಂಭಾವ್ಯ ಈಕ್ವಿಟಿ ಷೇರುಗಳ ಪರಿಣಾಮಗಳಿಗೆ ಹೊಂದಾಣಿಕೆ ಮಾಡಿರುವ ರೀತಿಯಲ್ಲಿ ಪ್ರಸಕ್ತ ಅವಧಿಯಲ್ಲಿ ಬಾಕಿಯಿರುವ ಈಕ್ವಿಟಿ ಷೇರುಗಳ ತೂಗಲ್ಪಟ್ಟ ಸರಾಸರಿ ಸಂಖ್ಯೆಯಿಂದ ವಿಭಜಿಸುವ ಮೂಲಕ ಲೆಕ್ಕಹಾಕಲಾಗುವುದು.

13. **ತೆರಿಗೆ**

ಎ. ಆದಾಯ ತೆರಿಗೆಗಾಗಿ ಅನುವನ್ನು ಕಂಪನಿಗೆ ಅನ್ವಯಿಗೊಳ್ಳುವ ಸಂಬಂಧಿತ ತೆರಿಗೆ ನಿಯಂತ್ರಕಗಳ ಅನುಸಾರ ಲೆಕ್ಕಹಾಕಲಾಗುವುದು.

ಬಿ. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು

ಆದಾಯ ತೆರಿಗೆಗಾಗಿ ನೀಡಲಾಗಿರುವ ಲಾಭ ಹಾಗೂ ಹಣಕಾಸು ತ:ಖ್ತೆಗಳ ಅನುಸಾರ ಲಾಭ, ಇವೆರಡರ ನಡುವಿನ ಸಮಯದ ವ್ಯತ್ಯಾಸದ ಕಾರಣ ಭವಿಷ್ಯದಲ್ಲಿ ಉದ್ಭವಿಸುವ ತೆರಿಗೆಗಾಗಿ ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿ ಮತ್ತು ಜವಾಬ್ದಾರಿಗಳನ್ನು ಪರಿಗಣಿಸಲಾಗುವುದು. ಮುಂದೂಡಲ್ಪಟ್ಟಿರುವ ತೆರಿಗೆ ಆಸ್ತಿ ಮತ್ತು ಜವಾಬ್ದಾರಿಗಳನ್ನು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಂದು ಜಾರಿಗೊಳಿಸಲಾಗಿರುವ ಅಥವಾ ಭಾಗಶ:ವಾಗಿ ಜಾರಿಗೊಳಿಸಲಾಗಿರುವ ತೆರಿಗೆ ದರಗಳು/ಅಧಿನಿಯಮ/ನಿಯಮಗಳ ಅನುವುಗಳ ಅನುಸಾರ ಲೆಕ್ಕಹಾಕಲಾಗುವುದು ಹಾಗೂ ಪ್ರತಿಯೊಂದು ಆಸ್ತಿ–ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಅವುಗಳು ಹೊಂದಿರುವ ಮೌಲ್ಯಗಳ ಸೂಕ್ತತೆಯನ್ನು ಸಮೀಕ್ಷಿಸಲಾಗುವುದು.

14. **ಚಾಲ್ತಿ/ಚಾಲ್ತಿಯೇತರ ವರ್ಗೀಕರಣ:**

ಕಂಪನಿಯು ತನ್ನ ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಚಾಲ್ತಿ/ಚಾಲ್ತಿಯೇತರ ವರ್ಗೀಕರಣದ ಆಧಾರದ ಮೇರೆಗೆ ಪ್ರಸ್ತುತಪಡಿಸುವುದು. ಈ ಕೆಳಗಿನ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಒಂದು ಆಸ್ತಿಯನ್ನು ಚಾಲ್ತಿ ಎಂಬುದಾಗಿ ವರ್ಗೀಕರಿಸಲಾಗುವುದು

–ಒಂದು ಸಾಮಾನ್ಯ ಕಾರ್ಯಾಚರಣೆಯ ಅವರ್ತನದಲ್ಲಿ ಮಾರಾಟ ಮಾಡುವ ಅಥವಾ ಬಳಸಿಕೊಳ್ಳುವ
–ಅದನ್ನು ವ್ಯಾಪಾರ ಮಾಡುವ ಪ್ರಾಥಮಿಕ ಉದ್ದೇಶದಿಂದ ಹೊಂದಿರುವುದು.
–ವರದಿಯ ಅವಧಿಯ ನಂತರ ಹನ್ನೆರಡು ತಿಂಗಳುಗಳ ಒಳಗೆ ಪ್ರತಿಫಲ ನೀಡುವ ನಿರೀಕ್ಷೆಯಿರುವುದು ಅಥವಾ
–ನಗದು ಮತ್ತು ನಗದಿಗೆ ಸಮಾನವಾದವುಗಳು ಬದಲಾಯಿಸುವುದು ಅಥವಾ ಒಂದು ಜವಾಬ್ದಾರಿಯನ್ನು ಇತ್ಯರ್ಥಗೊಳಿಸುವ ಸಲುವಾಗಿ ಕಡೆಯ ಪಕ್ಷ ಹನ್ನೆರಡು ತಿಂಗಳುಗಳಲ್ಲಿ ಬಳಸುವುದನ್ನು ನಿರ್ಬಂಧಿಸದ ಹೊರತು.

ಚಾಲ್ತಿ ಆಸ್ತಿಗಳು ಚಾಲ್ತಿಯೇತರ ಹಣಕಾಸು ಆಸ್ತಿಗಳ ಚಾಲ್ತಿ ಭಾಗವನ್ನು ಒಳಗೊಂಡಿರುತ್ತವೆ.

ಇತರೆ ಎಲ್ಲಾ ಆಸ್ತಿಗಳನ್ನು ಚಾಲ್ತಿಯೇತರ ಆಸ್ತಿಗಳು ಎಂಬುದಾಗಿ ವರ್ಗೀಕರಿಸಲಾಗುವುದು.
ಈ ಕೆಳಗಿನ ಯಾವುದೇ ಒಂದು ಮಾನದಂಡವನ್ನು ಪೂರೈಸಿದಲ್ಲಿ ಒಂದು ಜವಾಬ್ದಾರಿಯು ಚಾಲ್ತಿ ಜವಾಬ್ದಾರಿಯಾಗುತ್ತದೆ.

–ಅದನ್ನು ಸಾಮಾನ್ಯ ಕಾರ್ಯಾಚರಣೆಯ ಆವರ್ತನದಲ್ಲಿ ಇತ್ಯರ್ಥಪಡಿಸುವ ನಿರೀಕ್ಷೆ ಇದ್ದಲ್ಲಿ
–ಅದನ್ನು ವ್ಯಾಪಾರವ್ಯವಹಾರ ಮಾಡುವ ಸಲುವಾಗಿಯೇ ಹೊಂದಿದ್ದಲ್ಲಿ.
–ಅದು ವರದಿಯ ಅವಧಿಯ ನಂತರ 12 ತಿಂಗಳುಗಳ ಒಳಗೆ ಅದು ಇತ್ಯರ್ಥಗೊಳ್ಳಲು ಬಾಕಿ ಇದ್ದಲ್ಲಿ
–ಜವಾಬ್ದಾರಿಯನ್ನು ವರದಿಯ ಅವಧಿಯ ನಂತರ ಕಡೆಯ ಪಕ್ಷ 12 ತಿಂಗಳುಗಳವರೆಗೆ ಜವಾಬ್ದಾರಿಯನ್ನು ಇತ್ಯರ್ಥಪಡಿಸುವುದನ್ನು ಮುಂದೂಡುವ ಷರತ್ತುರಹಿತ ಹಕ್ಕು ಇಲ್ಲದಿದ್ದಲ್ಲಿ.

ಚಾಲ್ತಿ ಜವಾಬ್ದಾರಿಗಳು ದೀರ್ಘಾವಧಿ ಹಣಕಾಸು ಜವಾಬ್ದಾರಿಗಳ ಚಾಲ್ತಿ ಭಾಗವನ್ನು ಒಳಗೊಂಡಿರುತ್ತವೆ.

ಕಂಪನಿಯು ಇತರೆ ಎಲ್ಲಾ ಜವಾಬ್ದಾರಿಗಳನ್ನು ಚಾಲ್ತಿಯೇತರ ಎಂಬುದಾಗಿ ವರ್ಗೀಕರಿಸುತ್ತದೆ.

ಕಾರ್ಯಾಚರಣೆಯ ಆವರ್ತನ ಎಂದರೆ ಆಸ್ತಿಗಳ ಸ್ವಾಧೀನ ನಗದು ಮತ್ತು ನಗದಿಗೆ ಸಮಾನವಾದವುಗಳ ರೂಪದಲ್ಲಿ ಅವುಗಳಿಂದ ಪ್ರತಿಫಲವನ್ನು ಪಡೆದ ದಿನಾಂಕ ಇವೆರಡರ ನಡುವಿನ ಅವಧಿ. ಕಂಪನಿಯು ತನ್ನ ಕಾರ್ಯಾಚರಣೆಯ ಆವರ್ತನವನ್ನು 12 ತಿಂಗಳುಗಳು ಎಂಬುದಾಗಿ ಗುರುತಿಸಿರುವುದು.

15. <u>ಷೇರು ಬಂಡವಾಳ:</u>

ಸಾಮಾನ್ಯ ಷೇರುಗಳನ್ನು ಈಕ್ವಿಟಿ ಎಂಬುದಾಗಿ ವರ್ಗೀಕರಿಸಲಾಗಿದೆ. ಸಾಮಾನ್ಯ ಷೇರುಗಳನ್ನು ಹಂಚಿಕೆ ಮಾಡಲು ನೇರವಾಗಿ ಕಾರಣವಾಗುವಂತಹ ´ ಹೆಚ್ಚುವರಿ ವೆಚ್ಚಗಳನ್ನು ಇತರೆ ಈಕ್ವಿಟಿಯಿಂದ ಒಂದು ಕಳೆಯುವಿಕೆ ಎಂಬುದಾಗಿ ಪರಿಗಣಿಸಲಾಗುವುದು, ಯಾವುದಾದರೂ ತೆರಿಗೆ ಪಾವತಿ ಪರಿಣಾಮಗಳಿದ್ದಲ್ಲಿ, ಅವುಗಳನ್ನು ಕಳೆದನಂತರ.

--ಸಹಿ ಮಾಡಲಾಗಿದೆ--	--ಸಹಿ ಮಾಡಲಾಗಿದೆ—
ಮೊಹಮ್ಮದ್ ನಝೀರ್	ಎಂ. ಶಶಿಧರ್ ಹೆಗ್ಡೆ
ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು
ಡಿಐಎನ್ : 07701205	ಡಿಐಎನ್ : 07742390
25.06.2018, ಮಂಗಳೂರು	25.06.2018, ಮಂಗಳೂರು

ನಮ್ಮ ಅದೇ ದಿನಾಂಕದ ವರದಿಯ ಷರತ್ತಿಗೆ ಒಳಪಟ್ಟಂತೆ

ಕಾಮತ್ ಅಂಡ್ ರಾವ್, ಇವರಿಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
--ಸಹಿ ಮಾಡಲಾಗಿದೆ—
(ಶ್ರೀನಿವಾಸ್ ಎಸ್. ಕಾಮತ್, ಪಾಲುದಾರರು)

ಮಂಗಳೂರು
5 ಸೆಪ್ಟಂಬರ್ 2018

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು74999ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ತಃಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಟಿಪ್ಪಣಿ 17

ಹಣಕಾಸು ತಃಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

1) ಸಂಬಂಧಿತ ತಂಡಗಳ ಜೊತೆ ಮಾಡಲಾಗಿರುವ ವ್ಯವಹಾರಗಳನ್ನು ಬಹಿರಂಗಪಡಿಸುವಿಕೆ

ಒಂದು ಸಂಬಂಧಿತ ತಂಡಗಳ ಜೊತೆ ಮಾಡಲಾಗಿರುವ ವ್ಯವಹಾರ ಎಂದರೆ ಸಂಬಂಧಿತ ತಂಡಗಳ ನಡುವೆ ಒಂದು ದರ/ಮೌಲ್ಯವನ್ನು ಪಡೆದುಕೊಂಡು ಅಥವಾ ಪಡೆದುಕೊಳ್ಳದೆಯೇ ಸಂಪನ್ಮೂಲಗಳು ಅಥವಾ ಬದ್ಧತೆಗಳನ್ನು ವರ್ಗಾಯಿಸುವುದು. ಪ್ರಸಕ್ತ ಸಾಲಿನಲ್ಲಿ ಸಂಬಂಧಿತ ತಂಡಗಳ ಜೊತೆ ಮಾಡಲಾಗಿರುವ ವ್ಯವಹಾರಗಳು ಈ ಕೆಳಗಿನಂತಿದ್ದವು :

ರೂಪಾಯಿಗಳಲ್ಲಿ

ತಂಡದ ಹೆಸರು	ಸಂಬಂಧ	ವ್ಯವಹಾರದ ಸ್ವರೂಪ	06.04.2017ರಿಂದ 31.03.2018
ಲ್ಯಾನ್ಸ್‌ಲಾಟ್ ಅಂತೋಣಿ ರೊನಾಲ್ಡ್ ಪಿಂಟೊ	ನಿರ್ದೇಶಕರು	ನಿರ್ದೇಶಕರುಗಳ ಮಂಡಳಿಯ ಸಭೆಗೆ ಹಾಜರಾದುದಕ್ಕಾಗಿ ಶುಲ್ಕ	8,000.00
ಎಂ. ಶಶಿಧರ್ ಹೆಗ್ಡೆ	ನಿರ್ದೇಶಕರು	ನಿರ್ದೇಶಕರುಗಳ ಮಂಡಳಿಯ ಸಭೆಗೆ ಹಾಜರಾದುದಕ್ಕಾಗಿ ಶುಲ್ಕ	6,000.00
ಪ್ರೇಮಾನಂದ ಶೆಟ್ಟಿ	ನಿರ್ದೇಶಕರು	ನಿರ್ದೇಶಕರುಗಳ ಮಂಡಳಿಯ ಸಭೆಗೆ ಹಾಜರಾದುದಕ್ಕಾಗಿ ಶುಲ್ಕ	8,000.00
ಕವಿತಾ ಸನಿಲ್	ನಿರ್ದೇಶಕರು	ನಿರ್ದೇಶಕರುಗಳ ಮಂಡಳಿಯ ಸಭೆಗೆ ಹಾಜರಾದುದಕ್ಕಾಗಿ ಶುಲ್ಕ	6,000.00

ಕಂಪನಿಯು ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ದಿಮೆಯಾಗಿರುತ್ತದೆ ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ-18ರ ಅನುಸಾರ ಇತರೆ ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳೊಂದಿಗಿನ ವ್ಯವಹಾರಗಳನ್ನು ಬಹಿರಂಗಪಡಿಸುವ ಅಗತ್ಯತೆಯಿರುವುದಿಲ್ಲ.

2) ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳ ಅಡಿಯಲ್ಲಿನ ಶಿಲ್ಕು ಖಚಿತಪಡಿಸಿಕೊಳ್ಳುವಿಕೆಯ ಷರತ್ತಿಗೆ ಒಳಪಟ್ಟಿರುತ್ತದೆ.

3) <u>ಷೇರು ಒಂದರ ಗಳಿಗೆಗಳು (ಇಪಿಎಸ್)</u>

ರೂಪಾಯಿಗಳಲ್ಲಿ

ವಿವರಗಳು	31 ಮಾರ್ಚ್ 2018 ರಲ್ಲಿದ್ದಂತೆ
ಈಕ್ವಿಟಿ ಷೇರುದಾರರಿಗೆ ಲಭ್ಯವಿದ್ದ ನಿವ್ವಳ ಲಾಭ	26,673.91
ಮೂಲ ಷೇರು ಒಂದರ ಗಳಿಕೆಗಾಗಿ ಈಕ್ವಿಟಿ ಷೇರುಗಳ ತೂಗಲ್ಪಟ್ಟ ಸರಾಸರಿ ಸಂಖ್ಯೆ	10,000.00
ಷೇರು ಒಂದರ ಮೂಲ ಬೆಲೆ	100.00
ಮೂಲ ಷೇರು ಒಂದರ ಗಳಿಕೆ	2.67
ಮೂಲ ಷೇರು ಒಂದರ ಗಳಿಕೆಗಾಗಿ ಈಕ್ವಿಟಿ ಷೇರುಗಳ ತೂಗಲ್ಪಟ್ಟ ಸರಾಸರಿ ಸಂಖ್ಯೆ	10,000.00
ದುರ್ಬಲಗೊಳಿಸಲ್ಪಟ್ಟ ಷೇರು ಒಂದರ ಗಳಿಕೆ	2.67

4) <u>ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳು</u>

31 ಮಾರ್ಚ್ 2018ರಲ್ಲಿದ್ದಂತೆ ಅನುವುಗಳು, ಆಕಸ್ಮಿಕ ಜವಾಬ್ದಾರಿಗಳು ಮತ್ತು ಆಕಸ್ಮಿಕ ಆಸ್ತಿಗಳು ಯಾವುದೂ ಇರಲಿಲ್ಲ.

5) <u>ಸರ್ಕಾರಿ ಅನುದಾನಗಳು – ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 12ರ ಅಗತ್ಯತೆಯಿಂತೆ</u>

ಪ್ರಸಕ್ತ ಸಾಲಿನಲ್ಲಿ ಕಂಪನಿಯು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಭಾರತ ಸರ್ಕಾರದಿಂದ ಅನುದಾನಗಳನ್ನು ಸ್ವೀಕರಿಸಿರುವುದು:

ವಿವರಗಳು	ಯೋಜನೆಗಳ ಕಡೆಗೆ	ಎ ಅಂಡ್ ಒಇ ಕಡೆಗೆ ಭಾರತ ಸರ್ಕಾರದ ಪಾಲು	ಕನಮೂಅಹನಿವು ಎಸ್‌ಸಿಪಿ ತಯಾರಿಕೆಯ ಕಡೆಗೆ ಇಟ್ಟುಕೊಂಡಿರುವ ಹಣಕಾಸು	ಮಂಗಳೂರು ಮಹಾನಗರ ಪಾಲಿಕೆಯು ವರ್ಗಾಯಿಸಿರುವ ಹಣಕಾಸು
ಸ್ವೀಕರಿಸಲಾದ ಅನುದಾನ	2,12,00,00,000.00	2,00,00,000.00	1,00,00,000.00	46,25,186.81
ಒಟ್ಟು	**2,12,00,00,000.00**	**2,00,00,000.00**	**1,00,00,000.00**	**46,25,186.81**
ಈಕ್ವಿಟಿ ಷೇರುಗಳ ಕಡೆಗೆ ಕಂಪನಿಯು ಪಾವತಿಸಿರುವುದು		5,00,000.00	5,00,000.00	
ಎಸ್‌ಸಿಪಿ ತಯಾರಿಕೆಯ ಕಡೆಗೆ ಕನಮೂಅಹನಿವು ಪಾವತಿಸಿರುವುದು (ಕಂಪನಿಯ ಸ್ಥಾಪನೆಗೆ ಮುಂಚೆ)			95,00,000.00	46,25,186.81
ಎ ಅಂಡ್ ಒಇ ಕಡೆಗೆ ಬಳಸಿಕೊಳ್ಳಲಾಗಿರುವುದು		1,45,37,965.09		
ಒಟ್ಟಾರೆ ಕಡಿದುಕೊಂಡಿರುವಿಕೆಗಳು		1,50,37,965.09	1,00,00,000.00	46,25,186.81
ಅಂತಿಮ ಶಿಲ್ಕು	**2,12,00,00,000.00**	**49,62,034.91**		**-**

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸಿಐಎನ್: ಯು74999ಕೆಎ2017ಪಿಎಲ್‌ಸಿ102010

31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು

ಟಿಪ್ಪಣಿ 17

ಟಿಪ್ಪಣಿಗಳು :

1. ಎಸ್‌ಸಿಪಿ ತಯಾರಿಕೆಗಾಗಿ ಭಾರತ ಸರ್ಕಾರವು ಕನಮೂಅಹನಿಕ್ಕೆ ಬಿಡುಗಡೆಗೊಳಿಸಿದ ರೂ.1,00,00,000/- ಮೊತ್ತದ ಪೈಕಿ ನೋಂದಣಿ ಶುಲ್ಕಗಳು ಹಾಗೂ ಜಿಐಎಸ್ ತಂತ್ರಾಂಶ ಅನ್ವಯಿಗಳ ಖರೀದಿಗಳ ಕಡೆಗೆ ಅನುಕ್ರಮವಾಗಿ ರೂ.1,71,33,820/-ರಷ್ಟು ಹಾಗೂ ರೂ.58,23,353/-ರಷ್ಟು ಮೊತ್ತವನ್ನು ಪಾವತಿಸಿತು. ಕನಮೂಅಹನಿವು ಈ ನಿಟ್ಟಿನಲ್ಲಿ ಅಧಿಕ ಪ್ರಮಾಣದಲ್ಲಿ ಭರಿಸಿರುವ ರೂ.88,31,986.19/-ರಷ್ಟು ಮೊತವನ್ನು ಭಾರತ ಸರ್ಕಾರವು ಬಿಡುಗಡೆಗೊಳಿಸಿರುವ ವರಮಾನ ಅನುದಾನದಿಂದ ಹೊಂದಾಣಿಕೆ ಮಾಡಿಕೊಂಡಿರುವುದು.

   ಮಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಸರ್ಕಾರಿ ಅನುದಾನಗಳನ್ನು ಸ್ವೀಕರಿಸಲಾಗಿರುವುದು.

